ಉಚಿತ ಪ್ರತಿಗಳಿಗಾಗಿ ಮತ್ತು
ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.

ನಮ್ಮ ವಿಳಾಸ:
**ದ ಕ್ರಿಸ್ಟಡೆಲ್ಫಿಯನ್ಸ್**
ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್
ಬೆಂಗಳೂರು - 560 005

# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 7

- ಸಮಾಧಾನ ಮತ್ತು ಸುರಕ್ಷತೆಯನ್ನು ಪಡಕೊಳ್ಳುವುದು ಹೇಗೆ?
- ನೀವು ಯೇಸುವಿಗಾಗಿ ಎಚ್ಚರದಿಂದ ಕಾದುಕೊಂಡಿದ್ದೀರೋ?
- ಕುದಿಯುವ ಕೆಟಲನ್ನು ಶುದ್ಧಪಡಿಸುವಾಗ .......
- ವಿವಾಹ ವಿಚ್ಛೇದನದ ಬಗ್ಗೆ ಕ್ರೈಸ್ತ ಉಪದೇಶ
- ಬ್ಯಾಬಿಲೋನ್ ದೇಶದ ಬೆಲ್ತ್‌ಶಚ್ಚರನು
- ತಪ್ಪಿಹೋದ ಮಗನು

## ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಆಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.


**Co-ordinator : Linus Daniel**

**e-mail : info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.



**ನೂತನ ಸೃಷ್ಟಿ ಪತ್ರಿಕೆಯ ತಂಡ**

**ಲೀನಸ್ ಡ್ಯಾನಿಯಲ್ : ಸಂಯೋಜಕರು**

**ಚೈತ್ರ ಸ್ವರೂಪ : ಕಾರ್ಯ ನಿರ್ವಹಣೆ, ಪುನರವಲೋಕನ ಮತ್ತು ಡಿ.ಟಿ.ಪಿ ಸಂಯೋಜಕರು.**


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕೆಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

**ರೆವರೆಂಡ್ ರಾಸ್‌ಪಾಲ್‌ರವರಿಗೆ ಕನ್ನಡ ಭಾಷಾಂತರ ಕಾರ್ಯಕ್ಕಾಗಿ ವಿಶೇಷ ಕೃತಜ್ಞತೆಗಳು**

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ಸಮಾಧಾನ ಮತ್ತು ಸುರಕ್ಷತೆಯನ್ನು ಪಡಕೊಳ್ಳುವುದು ಹೇಗೆ?

## ಮನಸ್ಸಮಾಧಾನ :

ಸರಿಯಾದ ಮನೋಸ್ಥಿತಿಯಲ್ಲಿ ಯಾರೂ ಅದಕ್ಕೆ ತದ್ವಿರುದ್ಧವಾದ ಅಶಾಂತಿ, ಕಳವಳ, ಭಯವನ್ನು ಕೇಳಿಕೊಳ್ಳುವುದಿಲ್ಲ. ಅನೇಕವುಗಳ ಕುರಿತು ಯೋಚಿಸಬೇಕಾದದ್ದೇ. ಆದರೆ ಅಸ್ತವ್ಯಸ್ತವಾದ "ಮನೋಯಾತನೆ"ಯುಳ್ಳ ಮನಸ್ಸು ಕಟ್ಟಿನಲ್ಲಿಲ್ಲದ ಹಾಗೂ ಸ್ಥಿಮಿತವಿಲ್ಲದ ಮನದಿಂದ ಬರುತ್ತದೆಂದು ವಿವರಿಸಬಹುದು. ಆದ್ದರಿಂದ ಮನಸ್ಸಮಾಧಾನವೇ ಅತ್ಯಂತ ಬೆಲೆಯುಳ್ಳದ್ದು. ಜನರನ್ನು ಚುರುಕಾಗಿರಿಸಲಿಕ್ಕೂ, ಅತ್ಯಂತ ಭರದಿಂದಲು ಅಪಾಯಕಾರಿ ಕಾರ್ಯಗಳನ್ನು ಎದುರಿಸಲೂ, ಬದಲಾಗುತ್ತಿರುವ ಜೀವನದ ಏರುತಗ್ಗುಗಳನ್ನೂ ಸಮಸ್ಯೆಗಳನ್ನೂ ನಿಭಾಯಿಸಲು ಅಗತ್ಯವಾದ ಬಲವನ್ನು ಸಮಾಧಾನವು ಕೊಡುತ್ತದೆ. ಜಾಣರು ಆತ್ಮದಲ್ಲಿ ಸಮಾಧಾನವನ್ನು ಆಶಿಸುತ್ತಾರೆ, ಆದರೆ ಭಯವೂ, ಸುರಕ್ಷೆಯೂ ಇಲ್ಲದಿರುವುದು ಇದನ್ನು ಅನುಭವಿಸಲು ಅಡ್ಡಿಪಡಿಸುತ್ತದೆ. ಆದ್ದರಿಂದಲೇ ಸಮಧಾನವೂ ಸುರಕ್ಷೆಯೂ ಒಂದರೊಂದಿಗೆ ಒಂದು ಇರುತ್ತದೆ. ಮೊದಲನೆಯದು ಬೇಕಾದಲ್ಲಿ ಎರಡನೆಯದನ್ನು ಪಡೆಯಲು ನಾವು ಪ್ರಯಾಸ ಪಡಬೇಕು.

## ಸಮಾಧಾನವೆಂದರೇನು?

ಸಮಾಧಾನವೆಂದರೆ :-

* ಎರಡು ಬೇರೆಬೇರೆಯಾದ ಬಾಧ್ಯತೆಗಳನ್ನು ಒಂದುಸೇರಿಸುವುದು,
* ಎರಡು ವಿರುದ್ಧ ಒತ್ತಡಗಳನ್ನು ಒಂದಾಗಿಸುವುದು,
* ಒಡೆದ ಬಿರುಕನ್ನು ಸರಿಪಡಿಸುವುದು,
* ಬಿಟ್ಟುಹೋಗಿರುವ ಸ್ಥಳವನ್ನು ಮುಚ್ಚುವುದು ಅಥವಾ
* ಮೊದಲು ತಳ್ಳಿಬಿಟ್ಟಿದ್ದ ಸತ್ಯವನ್ನು ಅರಿತುಕೊಳ್ಳುವುದು.

ಪ್ರಪಂಚದಲ್ಲಿ ಅನೇಕ ಶಕ್ತಿಗಳು ಮನುಷ್ಯರ ಹೃದಯದಲ್ಲಿ ಅಶಾಂತಿಯನ್ನು ಉಂಟುಮಾಡುತ್ತವೆ. ಅದು ಅವರನ್ನು ತೊಂದರೆಗೊಳಪಡಿಸಿ ಸಂಶಯದಲ್ಲಿ ತಳ್ಳುತ್ತದೆ. ಮಾತ್ರವಲ್ಲದೆ ಅವರಲ್ಲಿ ಭ್ರಾಂತಿಯನ್ನುಂಟುಮಾಡಿ ಅವರ ಧೈರ್ಯಗೆಡಿಸುತ್ತದೆ. ಭಯವು "ಅಸ್ಥಿರತೆಗೆ" ನಡೆಸುವ ಅತ್ಯಂತ ಬಲವಾದ ಶಕ್ತಿಯಾಗಿದೆ.

**ಭಯವು :-**

* ಅಪಜಯದ ಬಗ್ಗೆ,
* ತಿಳಿಯದವುಗಳ ಬಗ್ಗೆ,
* ಭವಿಷ್ಯದ ಬಗ್ಗೆ,
* ಕೆಟ್ಟ ಶಕ್ತಿಗಳ ಬಗ್ಗೆ,
* ಬಲಾತ್ಕಾರದ ಬಗ್ಗೆ,
* ಯುದ್ಧದ ಬಗ್ಗೆ,
* ಒಂಟಿತನದ ಬಗ್ಗೆ – ಇರುವಂಥದ್ದಾಗಿದೆ.

'ಅಸ್ಥಿರತೆ' ಎಂಬ ಪದದ ಸರ್ವಸಾಮಾನ್ಯವಾದ ಪರಿಣಾಮಮದಷ್ಟೇ ಕೆಡುಕುಳ್ಳದ್ದಾಗಿದೆ. ಬರುವ ವರ್ಷದ ಬಗ್ಗೆ, ಬ್ಯಾಂಕಿನ ಬಗ್ಗೆ, ನಿಮ್ಮ ಗೆಳೆಯರ ಬಗ್ಗೆ, ನಿಮ್ಮ ಉದ್ಯೋಗದ ಬಗ್ಗೆ, ನಿಮ್ಮ ಅಗತ್ಯಗಳನ್ನು ಸಂಧಿಸಿ ಅವುಗಳನ್ನು ಜಯಿಸುವುದರ ಬಗ್ಗೆ ಅಸ್ಥಿರತೆಯುಳ್ಳವರಾಗಿರಬಹುದು.

## ಪ್ರಾಮುಖ್ಯ ತತ್ವಗಳು :-

ಜೀವನವನ್ನು ಉತ್ತಮವಾಗಿ ನಡೆಸಬೇಕಾದರೆ ಜ್ಞಾನೋಕ್ತಿಯ ಪುಸ್ತಕದಲ್ಲಿ ಬರೆಯಲ್ಪಟ್ಟಿರುವ ಪ್ರಾಮುಖ್ಯ ತತ್ವಗಳನ್ನು ಪಾಲಿಸುವುದು ಅಗತ್ಯ. ಮುಂಬರುವ ಎಂತಹ ಕಷ್ಟಕರ ದಿನಗಳಲ್ಲಿನ ಕಣ್ಣೀರನ್ನು ಅಳಿಸಿ, ನಮ್ಮ ಹೃದಯಗಳನ್ನು ಸುಭದ್ರಪಡಿಸುವಂತಹ, ಹಾಗೂ ಸಮಾಧಾನ, ಸುರಕ್ಷತೆಯನ್ನು ಒದಗಿಸುವ ತತ್ವಗಳು ಇದರಲ್ಲಿ ಅಡಗಿದೆ.

ಜ್ಞಾನೋಕ್ತಿ 29:18 ರಲ್ಲಿನ ಒಂದು ಮುಖ್ಯ ತತ್ವವು "ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆ ಮೀರುವರು, ಧರ್ಮೋಪದೇಶವನ್ನು ಕೈಕೊಳ್ಳುವವನೋ ಧನ್ಯನಾಗುವನು" ಎಂಬುದಾಗಿ ಹೇಳುತ್ತದೆ. ಇಬ್ರಿಯ ಭಾಷೆಯಲ್ಲಿ "ಅಂಕೆ ಮೀರುವವರು" ಎಂಬ ಪದಕ್ಕೆ "ಭಾರವನ್ನು ತೆಗೆದಿಡುವುದು", "ನಿರ್ಭಂಧದಿಂದ ಬಿಡುಗಡೆ"ಮಾಡುವುದು, "ಸಡಿಲ ಮಾಡುವುದು", "ಕರಗಿಸುವುದು", "ಮುರಿಯುವುದು" ಎಂಬುದಾಗಿ ಅರ್ಥವನ್ನು ನೀಡುತ್ತದೆ. ಒಬ್ಬರು ಅದನ್ನು ಛಿದ್ರಛಿದ್ರವನ್ನಾಗಿಸುವುದು(ಚೂರುಚೂರು ಮಾಡುವುದು) ಎಂದೂ ಭಾಷಾಂತರಿಸಿದ್ದಾರೆ. ಅಂದರೆ ದೇವದರ್ಶಕರಿಲ್ಲದಿರುವಲ್ಲಿ ಜನರು ಛಿದ್ರಛಿದ್ರವಾಗುತ್ತಾರೆ.

## ದರ್ಶನವನ್ನು ಕಳಕೊಳ್ಳುವುದು :-

ನಾವು ಮುರಿಯುವುದು, ಛಿದ್ರಛಿದ್ರವನ್ನಾಗಿಸುವುದು ಎಂಬ ಪದಗಳನ್ನು ವಿವರಿಸುವಾಗ ಅದು ಸಮಾಧಾನಕ್ಕೆ ವಿರುದ್ಧವಾದ ಸ್ಥಿತಿಯಾಗಿರುವುದನ್ನು ನೋಡುತ್ತೇವೆ. ಅದು ನಿಜಕ್ಕೂ "ಅರಾಜಕತೆ"ಯಾಗಿರುತ್ತದೆ. ಎಲ್ಲಿ ಅರಾಜಕತೆ ಆಳ್ವಿಕೆ ನಡೆಸುತ್ತದೋ ಅಲ್ಲಿ ಸಮಾಧಾನಕ್ಕೂ, ಸುರಕ್ಷತೆಗೂ ಧಕ್ಕೆಯುಂಟಾಗಿರುತ್ತದೆ. ಅರಾಜಕತೆ ಮತ್ತು ಅಸಮಾಧಾನ ಎಂಬ ಪದಗಳ ಬಲವು ದರ್ಶನವಿಲ್ಲದಿರುವುದನ್ನು ಹೊರಪಡಿಸುತ್ತದೆ. ದರ್ಶನ ಎಂಬ ಪದವನ್ನು "ಕಣ್ಣಿನ ದರ್ಶನ"ಕ್ಕೆ ಸಾಧಾರಣವಾಗಿ ಹೋಲಿಸುವುದುಂಟು, ಆದರೆ ಇಲ್ಲಿ ನೋಡುವುದಕ್ಕಾಗುವ ಶಕ್ತಿಯ ಜೊತೆಗೆ ನೋಡಬೇಕಾದ ಆದರ್ಶವನ್ನೂ ಹೇಳಲಾಗುತ್ತದೆ.



Clipart courtesy FCIT

ಒಂದು ವೇಳೆ ಒಬ್ಬರು ನಾನು ಬರುವ ತಿಂಗಳಲ್ಲಿ ರಜಾ ತೆಗೆದುಕೊಳ್ಳುವುದನ್ನು ದರ್ಶಿಸುತ್ತೇನೆ ಎಂದರೆ ಅವರು ತಮ್ಮ ರಜಾ ಕಾಲವನ್ನು ಮೊದಲೇ ದೃಷ್ಟಿಸಿದ್ದಾರೆಂದು ತಿಳಿಯಬೇಕು.

ಬೇರೆ ರೀತಿಯಲ್ಲಿ ನೋಡುವಾಗ ಈತನಿಗೆ ದರ್ಶನವಿಲ್ಲ ಎಂದರೆ, ಆ ವಿಷಯದಲ್ಲಿ ಆತನಿಗೆ ದೂರದ ದೃಷ್ಟಿ(ದರ್ಶನ), ಭವಿಷ್ಯದ ದರ್ಶನ ಇಲ್ಲ. ಆದ್ದರಿಂದ ಈ ದರ್ಶನ ಎಂಬ ಪದವು ಕ್ರಿಯಾ ಪದವಾಗಿದೆ. ಅದು ನೋಡುವ ಕ್ರಿಯೆಯನ್ನು ಕುರಿತದ್ದಾಗಿದೆ. ಹಾಗೆಯೇ ನಾಮ ಪದವಾಗಿಯೂ ಇದೆ. ಅದು ನೋಡದೇ ಇರುವುದನ್ನು ನೋಡಿದ ಕಾರ್ಯವನ್ನು ಕುರಿತಾದದ್ದು.

ಜ್ಞಾನೋಕ್ತಿಯಲ್ಲಿರುವ ಈ ಪ್ರಾಮುಖ್ಯ ತತ್ವವು ಆಳವಾದ ಸತ್ಯವನ್ನೊಳಗೊಂಡಿರುತ್ತದೆ. ಯಾಕಂದರೆ ಇದನ್ನು ದೇವರ ಪರಿಶುದ್ಧಾತ್ಮ ಪ್ರೇರಿತನಾದ ಒಬ್ಬ ಇಬ್ರಿಯನು ಹೀಗೆ ಬರೆದಿರುತ್ತಾನೆ. "ದೇವದರ್ಶಕರಿಲ್ಲದಿರುವಲ್ಲಿ......" ಎಂದರೆ ಒಂದು ವಿಶೇಷವಾದ ಜ್ಞಾನದೃಷ್ಟಿಯ ಬಗ್ಗೆ ಬರೆದಿರುವನು. ಈತನು ರಜಾ ಕಾಲದ ಬಗ್ಗೆ ಯೋಚಿಸಿಲ್ಲ ಆದರೆ ಪವಿತ್ರ ದಿನಗಳ ಬಗ್ಗೆ ಯೋಚಿಸಿರುವನು. ಅಂದರೆ ಅವನು ದೇವರಿಂದ ಹೊಂದಿದ ವಿಶೇಷವಾದ, ಸ್ಥಿರವಾದ ಪ್ರಕಟನೆಯಾಗಿರುತ್ತದೆ.



ದೈವಪ್ರೇರಿತನದ ಈತನು ಹೇಳುವುದೇನೆಂದರೆ, ದೇವವಾಕ್ಯಕ್ಕನುಸಾರವಾದ ದೇವರ ಭವಿಷ್ಯದರ್ಶನವನ್ನು ನಾವು ಹೊಂದದೆ ಇದ್ದರೆ, ಸಮಾಧಾನವನ್ನು ಸುರಕ್ಷಣೆಯನ್ನು ಅನುಭವಿಸಲಾರೆವು.

## ಸಮುವೇಲನ ದರ್ಶನ :-

ನ್ಯಾಯಸ್ಥಾಪಕರ ಅಂತಿಮ ಘಟ್ಟದಲ್ಲಿ ದೇವರಿಂದ ಆತನ ಜನರಿಗೆ ಇದ್ದ ಸಂಪರ್ಕವು ಯಾವುದೋ ಕಾರಣದಿಂದ ಕಡಿದು ಹೋಗಿದ್ದಿತು. ಸಮುವೇಲನ ಪುಸ್ತಕದಲ್ಲಿ ಹನ್ನಳ ಎಳೆಮಗನು ಬಂದು ಹೇಗೆ ಶಿಲೋವಿನಲ್ಲಿದ್ದ ದೇವಾಲಯದಲ್ಲಿ ಕೆಲಸ ನಡೆಸುವ ಸಂದರ್ಭದಲ್ಲಿ ಸಂಜೆಯಲ್ಲಿ ನಡೆದ ಆ ಘಟನೆಗಳ ಬಗ್ಗೆ ಹೀಗೆ ವಿವರಿಸಲ್ಪಟ್ಟಿದೆ:



"ಬಾಲಕನಾದ ಸಮುವೇಲನು ಏಲಿಯ ಕೈಕೆಳಗಿದ್ದುಕೊಂಡು ಯೆಹೋವನ ಸೇವೆ ಮಾಡುತ್ತಿದ್ದನಷ್ಟೆ. ಆ ಕಾಲದಲ್ಲಿ ದೇವೋಕ್ತಿಗಳು ವಿರಳವಾಗಿದ್ದವು; ದೇವದರ್ಶನಗಳು ಅಪರೂಪವಾಗಿದ್ದವು. ಏಲಿಯ ಕಣ್ಣುಗಳು ದಿನದಿನಕ್ಕೆ ಮೊಬ್ಬಾಗುತ್ತಾ ಬಂದು ಚೆನ್ನಾಗಿ ಕಾಣದೆ ಹೋಗಿದ್ದವು. ಇವನು ಒಂದಾನೊಂದು ರಾತ್ರಿ ತನ್ನ ಸ್ಥಳದಲ್ಲಿ ಮಲಗಿದ್ದನು; ಸಮುವೇಲನು ಯೆಹೋವನ ಮಂದಿರದಲ್ಲಿ ದೇವರ ಮಂಜೂಷವಿದ್ದ ಸ್ಥಳದಲ್ಲಿ ಮಲಗಿದ್ದನು. ಆಗ ದೇವದೀಪವು ಇನ್ನೂ ಉರಿಯುತ್ತಿರುವಾಗಲೇ ಯೆಹೋವನು ಸಮುವೇಲನನ್ನು ಕರೆದನು; ಸಮುವೇಲನು ಬಂದನೆಂದು ಉತ್ತರಕೊಟ್ಟು ಒಡನೆ ಏಲಿಯ ಬಳಿಗೆ ಹೋಗಿ-ಇಗೋ ಬಂದಿದ್ದೇನೆ; ನೀನು ನನ್ನನ್ನು ಕರೆದಿಯಲ್ಲಾ ಎನ್ನಲು ಏಲಿಯು-ನಾನು ನಿನ್ನನ್ನು ಕರೆಯಲಿಲ್ಲ, ಹೋಗಿ ಮಲಗಿಕೋ ಅಂದನು"(1ಸಮುವೇಲ 3:1-5).

ಶೀಘ್ರದಲ್ಲಿ ಸರಿಪಡಿಸಲಿಕ್ಕಿದ್ದ ಆ ಸಂಪರ್ಕದ ಕಡಿತದ ಬಗ್ಗೆ ಇಲ್ಲಿ ನೋಡಿದ್ದೀರಲ್ಲವೇ? ಅಲ್ಲಿ ದರ್ಶನವಿರಲಿಲ್ಲ. ಆದ್ದರಿಂದ ದೇವವಾಕ್ಯವು ಅಪರೂಪವಾಗಿದ್ದಿತು. ಕಾರಣ ಅಲ್ಲಿ ತೆರೆದ ಜ್ಞಾನದೃಷ್ಟಿಯಿರಲಿಲ್ಲ. ಇತರ ಭಾಷಾಂತರಗಳಲ್ಲಿ ಆಗಾಗ್ಗೆ ದರ್ಶನವಿರಲಿಲ್ಲವೆಂದೂ, ಅನೇಕರಿಗೆ ತಿಳಿದು ಬಂದಿರಲಿಲ್ಲವೆಂದೂ ಹೇಳಲ್ಪಡುತ್ತದೆ. ಎಲ್ಲಿಂದ ಈ ಜ್ಞಾನದೃಷ್ಟಿ(ದೈವದರ್ಶನ) ಬರಬೇಕಿತ್ತು? ಮನುಷ್ಯರು ದೇವರ ಮಾತನ್ನು ಕೇಳಲಿಲ್ಲ, ಆತನ ವಾಕ್ಯಗಳಲ್ಲಿ ಅವರು ಗಮನ ಹರಿಸಿರಲಿಲ್ಲ, ಆತ್ಮೀಕವಾದ ಹೊಂದಿಕೆ ಇರಲಿಲ್ಲ, ಅದೃಶ್ಯವದದ್ದನ್ನು ಅವರು ಕಾಣಲಿಲ್ಲ. ಶೀಘ್ರದಲ್ಲೇ ಅವರು ದೇವರಿಂದ ದೂರವಾದರು. ಅವರ ಮಧ್ಯೆ ಇದ್ದ ದೇವರ ಪ್ರಭುತ್ವವನ್ನು ಅವರು ಕಂಡುಕೊಳ್ಳಲಿಲ್ಲ, ಬದಲು ಇತರ ದೇಶಗಳವರಂತೆ ರಾಜನಿಗಾಗಿ ತವಕಗೊಂಡರು. ಆಗ ದೇವರು ಸಮುವೇಲನಿಗೆ "ಅವರು ನಿನ್ನನ್ನು ತಿರಸ್ಕರಿಸಿದರು, ನನ್ನನ್ನೂ ತಿರಸ್ಕರಿಸಿದ್ದಾರೆ" ಎಂದು ತಿಳಿಸಿದನು. ದೈವದರ್ಶನವಿಲ್ಲದೆ ಇದ್ದರೆ ಜನರು ಛಿದ್ರಛಿದ್ರವಾಗಿ ಹರಿಯಲ್ಪಡುವರು. ಈ ಸಂದರ್ಭವು ಜ್ಞಾನೋಕ್ತಿಯನ್ನು ಬರೆದ ಗ್ರಂಥಕರ್ತನ ದರ್ಶನದ ಬಗ್ಗೆ ತಿಳಿದುಕೊಳ್ಳಲು ಸಹಕರಿಸುತ್ತದೆ. ಸತ್ಯವೇದದಲ್ಲಿ ಹೊರಪಟ್ಟ ದೇವರ ಚಿತ್ತವನ್ನು ಅರಿತುಕೊಳ್ಳುವುದೇ ಆ ದರ್ಶನವಾಗಿದೆ.

-0-0-0-0-

# ನೀವು ಯೇಸುವಿಗಾಗಿ ಎಚ್ಚರದಿಂದ ಕಾದುಕೊಂಡಿದ್ದೀರೋ?

ಭಯಂಕರವಾದ ಹವಾಗುಣ, ಭಯವನ್ನು ಹುಟ್ಟಿಸುವ ಅಪಾಯಗಳು, ತೀವ್ರತೆಯ ರೋಗಗಳು, ಇಲ್ಲವೇ ತಕ್ಷಣದಲ್ಲಿ ನಡೆಯಲಿರುವ ಸೇನೆಯ ಕಾರ್ಯಕ್ರಮಗಳು ಇಂತಹ ಎಚ್ಚರಿಕೆಗಳನ್ನು ಕೊಡುವಾಗ ಎಲ್ಲರೂ ಅದನ್ನು ಅಂಗೀಕರಿಸುವುದಿಲ್ಲ. ಅದು ನಡೆಯುವುದಿಲ್ಲ ಎಂಬ ನಂಬಿಕೆಯಲ್ಲಿ, ಬರಲಿಕ್ಕಿರುವ ದೊಡ್ಡ ವಿಪತ್ತುಗಳ ಬಗ್ಗೆ ಚಿಂತಿಸದೆ ಇರುವುದನ್ನು ಕೆಲವರು ಆರಿಸಿಕೊಳ್ಳುವುದರಿಂದ ಹಾಗಾಗುತ್ತದೆ. ಆದರೆ ಡೆರಿಕ್ ಬ್ಯಾನ್‌ಯಾರ್ಡ್ ವಿವರಿಸುವಂತೆ ಅಳಿವಿನ ಕಡೆಗೆ ಜನರು ಅಲಕ್ಷ್ಯ ಹೊಂದುವಂತೆ ಒಂದು ಕಾರ್ಯಕ್ಕಾಗಿ ಕಾದಿರುವುದು ತಕ್ಕದ್ದಾಗಿ ಇರುತ್ತದೆ.

## ಯೇಸು ಬರುತ್ತಾನೆ :–

ಈ ಕಾಲವನ್ನು ಅಂತ್ಯಗೊಳಿಸಲಿಕ್ಕಾಗಿಯೂ, ದೇವರರಾಜ್ಯವನ್ನು ಸ್ಥಿರಪಡಿಸಲು ಯಾವಾಗ ಭೂಮಿಗೆ ಆತನು ಹಿಂತಿರುಗುವನೆಂದು ಆತನ ಬಳಿಯಲ್ಲಿ ಕೇಳಿದ್ದಕ್ಕೆ ಆತನ ಎರಡನೇ ಬರೋಣದ ಮುನ್ನೆಚ್ಚರಿಕೆಯಾದ ಗುರುತುಗಳಾಗಿ, ಸರದಂತೆ ಹಲವಾರು ನಿದರ್ಶನಗಳನ್ನು ಯೇಸುವು ಪಟ್ಟಿಮಾಡಿ ಹೇಳುತ್ತಾನೆ, ಅವುಗಳನ್ನು ನೀವು ಲೂಕ 21ನೇ ಅಧ್ಯಾಯದಲ್ಲಿ ಓದಬಹುದು. ಅದಲ್ಲದೆ ಈಗ ಕೆಲವಾರು ವರ್ಷಗಳಿಂದ ನಡೆಯುತ್ತಿರುವ ಯುದ್ಧಗಳು, ಬರಗಳೂ, ಭೂಕಂಪಗಳೂ ಇನ್ನೂ ಎಲ್ಲಾ ಉಪದ್ರವಗಳೂ ಸಾಲಾಗಿ ನಮ್ಮನ್ನು ಭಯಪಡಿಸುವಂತೆ, ಗಲಿಬಿಲಿಗೊಳಪಡಿಸುವಂತೆಯೂ ಹೆಚ್ಚುತ್ತಲಿವೆ.

ಅಂತಹ ಸ್ಥಿತಿಯಿಂದ ಭಾಧಿಸಲ್ಪಟ್ಟವರು ನಿಜವಾಗಿಯೂ ಮನೋವ್ಯಥೆಯಿಂದಲೂ, ಭೀತಿ ಹೊಂದುವರು. ಆದರೆ ಯೇಸುವಿಗಾಗಿ ಎಚ್ಚರಂದಿದ ಕಾದುಕೊಂಡಿರುವವರು ಇಂಥಹವುಗಳನ್ನು ಸ್ವಲ್ಪ ಬೇರೆಯೇ ರೀತಿಯಾಗಿ ನೋಡುವರು. ಯಾಕಂದರೆ ಯೇಸು ಹೇಳಿದ್ದೇನೆಂದರೆ "ಮೇಘದಲ್ಲಿ ಬರುವುದನ್ನು ಕಾಣುವರು, ಆದರೆ ಇವು ಸಂಭವಿಸುವಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ" (ಲೂಕ 21:28).

ಮುಂಬರುವ ಕಾರ್ಯಗಳಲ್ಲಿ ನಂಬಿಕೆಯನ್ನಿಟ್ಟಿರುವವರು ಯೇಸು ತಿರುಗಿ ಬರುವುದಕ್ಕಾಗಿ ಯಾಕೆ ಆಸೆಯಿಂದ ಕಾದಿದ್ದಾರೆ ಎಂಬುದನ್ನು ಈ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ತೋರಿಸಲಿದ್ದೇವೆ.

## ಆತನು ಯಾರು?

ಯೇಸು ದೇವರ ಒಬ್ಬನೇ ಮಗನು, ದೇವರು ತನ್ನ ಶಕ್ತಿಯಿಂದ ಕನ್ನಿಕೆಯಾದ ಮರಿಯಳಲ್ಲಿ ಒಬ್ಬ ಕುಮಾರನನ್ನು ಅನುಗ್ರಹಿಸಿದನು(ಲೂಕ 1:26–35). ಈ ಕಾರ್ಯವನ್ನು ಸ್ಥಿರಪಡಿಸುವಂತೆ ಅಂದಿನ ಯಾಜಕನಾದ ಜಕರೀಯನು ದೇವರ ಬಲದಿಂದ ತುಂಬಿದವನಾಗಿ, ಅಬ್ರಹಾಮನಿಗೆ ಕೊಟ್ಟ ದೇವರ ವಾಗ್ದಾನಗಳ ನೆರವೇರುವಿಕೆಗಾಗಿ ಯೇಸು ಬಂದನು ಎಂದು ಪ್ರವಾದಿಸಿದನು.



"ಇಸ್ರಾಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು; ಆತನು ಪೂರ್ವದಲ್ಲಿ ತನ್ನ ಶ್ರೀಪ್ರವಾದಿಗಳ ಬಾಯಿಂದ ತಾನು ಹೇಳಿದಂತೆಯೇ ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟುಮಾಡಿದ್ದಾನೆ;



ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮಗೋಸ್ಕರ ಒಬ್ಬ ರಕ್ಷಣವೀರನನ್ನು ಎಬ್ಬಿಸಿದ್ದಾನೆ. ಆತನು ನಮ್ಮ ಪಿತೃಗಳಿಗೆ ದಯೆಯನ್ನು ತೋರಿಸುವವನಾಗಿಯೂ ನಮ್ಮ ಮೂಲಪಿತೃವಾದ ಅಬ್ರಹಾಮನಿಗೆ ಪ್ರಮಾಣಮಾಡಿ ಕೊಟ್ಟ ತನ್ನ ಪರಿಶುದ್ಧವಾದ ಒಡಂಬಡಿಕೆಯನ್ನು ನೆನಸಿಕೊಳ್ಳುವವನಾಗಿಯೂ ಇದ್ದು ನಮ್ಮ ವೈರಿಗಳಿಂದಲೂ ನಮ್ಮನ್ನು ದ್ವೇಷಿಸುವವರೆಲ್ಲರ ಕೈಯಿಂದಲೂ ನಮ್ಮನ್ನು ತಪ್ಪಿಸಿದ್ದಾನೆ. ಹೀಗೆ ನಾವು ನಮ್ಮ ವೈರಿಗಳ ಕೈಯಿಂದ ಬಿಡುಗಡೆ ಹೊಂದಿ ಭಯವಿಲ್ಲದವರಾಗಿದ್ದು ನಮ್ಮ ಜೀವಮಾನದಲ್ಲೆಲ್ಲಾ ನಿರ್ಮಲಚಿತ್ತದಿಂದಲೂ ನೀತಿಯಿಂದಲೂ ತನ್ನ ಸನ್ನಿಧಿಯಲ್ಲಿ ಸೇವೆ ಮಾಡುವಂತೆ ನಮಗೆ ಅನುಕೂಲ ಮಾಡಿದ್ದಾನೆ" (ಲೂಕ 1:68–75).

## ಪಾಪ ರಹಿತನು :–

ಮರ್ತ್ಯಳಾದ ತಾಯಿಗೆ ಮಗನಾಗಿ ಹುಟ್ಟಿದ್ದರಿಂದ ಯೇಸು ಸಹಾ ಸಾಯುವ ಸ್ವಭಾವ ಹೊಂದಿದ್ದನು. ಆದ್ದರಿಂದ "ಆತನುಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಒಳಗಾದನು, ಪಾಪಮಾತ್ರ ಮಾಡಲಿಲ್ಲ" (ಇಬ್ರಿಯ 4:15). ಆತನು ಮುಂಚೆಯೂ ಈಗಲೂ "ಪರಿಶುದ್ಧನೂ, ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು" (ಇಬ್ರಿಯ 7:26). ಯೇಸು ಹೀಗೆ ಭಾಧೆಗಳನ್ನು ಅನುಭವಿಸಿದನು, ಸತ್ತು ಹೂಣಲ್ಪಟ್ಟು ಸಮಾಧಿಯಿಂದ ದೇವರು ಆತನನ್ನು ಹೇಗೆ ಎಬ್ಬಿಸಿದನೆಂಬುದನ್ನು ನಾವು ಅರಿತಿದ್ದೇವೆ. ಅಪೋಸ್ತಲನಾದ ಪೇತ್ರನು ಆತನ ಬಗ್ಗೆ ಹೀಗೆ ಹೇಳುತ್ತಾನೆ: "ಆತನನ್ನು ದೇವರು ಮರಣ ವೇದನೆಗಳಿಂದ ಬಿಡಿಸಿ ಎಬ್ಬಿಸಿದನು; ಯಾಕಂದರೆ ಮರಣವು ಆತನನ್ನು ಹಿಡುಕೊಂಡಿರುವುದು ಅಸಾಧ್ಯವಾಗಿತ್ತು" (ಅಪೋಸ್ತಲರ ಕೃತ್ಯಗಳು 2:24).



ಯೇಸುವು ತನ್ನ ತಂದೆಯ ಚಿತ್ತವು ಹೇಗೇ ಇರಲಿ ಅಥವಾ ಹಕ್ಕಿನಿಂದ ಕೇಳಿದ್ದಾಗಿರಲಿ ತಾನು ಪೂರ್ಣವಾಗಿ ವಿಧೇಯನಾದನು. ಅಪೋಸ್ತಲನಾದ ಪೇತ್ರನು ಬರೆದಿರುವಂತೆ "ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆಗ್ರಹಿಸಿ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರರಿಗೆ ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2:8–11).

## ದೇವರು ಆರಿಸಿಕೊಂಡ ಅರಸನು :–

ಮಹಿಮೆಗೆ ಏರಿಸಲ್ಪಟ್ಟ ಸ್ಥಿತಿಯು ಆತನ ಪರಿಪೂರ್ಣವಾದ ವಿಧೇಯತೆಯಿಂದಲೇ ಎಂಬುದು ಆಗಗ್ಗೆ ಎತ್ತಿ ತೋರಿಸಲ್ಪಟ್ಟಿದೆ. ಕೀರ್ತನೆಗಳು 110ರಲ್ಲಿ ಯೇಸುವು ಚಿತ್ರಿಸಲ್ಪಟ್ಟಿದ್ದಾನೆಂಬುದನ್ನು ಅಪೋಸ್ತಲನಾದ ಪೇತ್ರನು ತಿಳಿಸುತ್ತಾ, ಆ ಪ್ರಾಚೀನ ಬರವಣಿಗೆಯಿಂದ ತೋರಿಸಿಕೊಡುತ್ತಾ ದೇವರ ದಯಕ್ಕಾಗಿ ಕಾದಿರಲಿಕ್ಕಾಗಿ ಯೇಸುವು ಪರಲೋಕಕ್ಕೆ ಏರಿಹೋಗುವ ಕಾಲದ ಅಂತ್ಯವನ್ನು ಮುಂತಿಳಿಸಲ್ಪಟ್ಟಿದೆ ಎಂಬುದನ್ನು ಅವನು ಅರ್ಥಮಾಡಿಕೊಂಡನು.

“ಈ ಯೇಸುವನ್ನು ದೇವರು ಎಬ್ಬಿಸಿದನು, ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ. ಆತನು ದೇವರ ಬಲಗೈಯಿಂದ ಏರಿಸಲ್ಪಟ್ಟು ದೇವರು ಕೊಟ್ಟ ವಾಗ್ದಾನದ ಪ್ರಕಾರ ಪರಿಶುದ್ಧಾತ್ಮವನ್ನು ಹೊಂದಿ ನಾವು ಈಗ ನೋಡುವಂಥದ್ದೂ, ಕೇಳುವಂಥದ್ದೂ ಆದ ಇದನ್ನು ಆತನು ಸುರಿಸಿದನು, ದಾವೀದನು ಪರಲೋಕಕ್ಕೆ ಎದ್ದು ಹೋಗಿಲ್ಲ, ಆದರೆ ಯೆಹೋವನು ನನ್ನ ಒಡೆಯನಿಗೆ ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು ಎಂದು ಅವನೇ ನುಡಿದಿದ್ದಾನೆ. ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು” (ಅಪೋಸ್ತಲರ ಕೃತ್ಯಗಳು 2:36).

ಮಾನವರಿಗಾಗಿ ತನ್ನನ್ನೇ ಅರ್ಪಿಸಿಕೊಂಡು ಮರಣವನ್ನು ಹೊಂದಿ ಪುನರುತ್ಥಾನ ಪಡೆದು ಈಗ ಯೇಸು ಪಡೆದಿರುವ ಪದವಿಯೆಂದರೆ “ನಿರ್ಲಯವಾದ ಜೀವದ ಶಕ್ತಿಯುಳ್ಳವನು” (ಇಬ್ರಿಯ 7:16) ಅಮರತ್ವ ಹೊಂದಿದ್ದು ದೇವರಿಂದ ಅಧಿಕಾರ ಹೊಂದಿದ್ದಾನೆ. ಆತನನ್ನು ಪ್ರೀತಿಸುವರಿಗೂ, ಆತನಿಗೆ ಸೇವೆ ಮಾಡುವವರಿಗೂ ಸಹಾಯ ಮಾಡಲು ಯೇಸು ಶಕ್ತನಾಗಿದ್ದಾನೆ. ಆತನ ಸೇವೆಯಲ್ಲಿ ತೋರಿಸಲ್ಪಟ್ಟಂತೆಯೇ ಅಂತಹವರಿಗಾಗಿ ಆತನು ಸತ್ಯವಾಗಿಯೂ ನಮ್ಮ ಸ್ಥಿತಿಯನ್ನು ಕುರಿತು ಮನಸಾರೆ ಪರಿತಪಿಸುವವನಾಗಿದ್ದನು. ಈತನಂತೆ ಯಾರೂ ಎಂದು ಹೇಳಿರಲಿಕ್ಕಿಲ್ಲ. ಯಾಕಂದರೆ ಒಂದು ಸಾರಿ ಆತನು ಹೀಗಂದನು “ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾನು ಸಾತ್ವಿಕನೂ ದೀನ ಮನಸ್ಸುಳ್ಳವನು ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು” (ಮತ್ತಾಯ 11:28–30).

## ನಿತ್ಯಜೀವವನ್ನು ಕೊಡುವವನು :–

ಯೇಸುವಿನಲ್ಲಿರುವ ವಿಶ್ವಾಸಿಗಳು ಆತನು ಹಿಂತಿರುಗಿ ಬರುವಾಗ ಅವರು ನಿರ್ಲಯತ್ವವನ್ನು ಪಡಕೊಳ್ಳುವರು, ಅವರು ಆತನ ಬರೋಣಕ್ಕೆ ಮುಂಚಿತವಾಗಿಯೇ ಮರಣಹೊಂದಿದ್ದರೆ ನಿತ್ಯಜೀವವನ್ನು ಪಡಕೊಳ್ಳಲು ಎಬ್ಬಿಸಲ್ಪಡುವರೆಂದೂ ಬರೆಯಲ್ಪಟ್ಟಿದೆ(ದಾನಿಯೇಲ 12:2). ಯೇಸು ಎರಡನೇ ಸಾರಿ ಬಂದಾಗ ವಿಶ್ವಾಸಿಗಳು ಇನ್ನೂ ಜೀವದಿಂದಿರುವವರು ಆಗಿದ್ದರೆ ಯೇಸುವಿನಂತೆಯೇ ಮಾರ್ಪಾಡು ಹೊಂದುತ್ತಾರೆ(1ಕೊರಿಂಥ 15:50–53). ಯೇಸುವನ್ನು ರಾಜನೆಂದು ಈ ನಿಬಂಧನೆಗಳ ಪ್ರಕಾರ ಕರೆಯುವವರ ಮಧ್ಯದಲ್ಲಿ ಅವರು ಕಂಡುಬರುವರು. “ ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವುದಕ್ಕೆ ಯೋಗ್ಯನೇ, ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯು ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು” (ಪ್ರಕಟನೆ 5:9–10).

ಅರಸನಾದ ಯೇಸುಕ್ರಿಸ್ತನೊಂದಿಗೆ ಎಂದೆಂದೂ ಜೀವಿಸುವವರಾಗಲು, ಇಡೀ ಪ್ರಪಂಚದ ಮೇಲೆ ಯಾವ ತಪ್ಪೂ ಇಲ್ಲದ ರಾಜ್ಯಾಧಿಕಾರವನ್ನು ನಡೆಸುವಂಥರಾಗಬೇಕೆಂದು, ಇದಕ್ಕಾಗಿ ಸಿದ್ಧರಾಗುವುದೇ ನಿಜವಾದ ಎಲ್ಲಾ ವಿಶ್ವಾಸಿಗಳ ಗುರಿಯಾಗಿರಬೇಕು.

# ಬರಲಿರುವ ದೇವರ ರಾಜ್ಯ :–

ಭೂಮಿಯ ಮೇಲೆ ರಾಜನಾಗಿ ಆಳಲಿರುವ ಕರ್ತನಾದ ಯೇಸುವಿನ ಬರೋಣದ ನಂತರದ ಆಶೀರ್ವಾದಗಳಲ್ಲಿ ಕೆಲವನ್ನು ಮಾತ್ರವೇ ಮುಖ್ಯವಾಗಿ ಗುರುತಿಸಲು ಸಾಧ್ಯ. ಅದು ಒಂದು ಸಾವಿರ ವರ್ಷಗಳ



ಆಳ್ವಿಕೆಯಾಗಿರುತ್ತದೆ. ಆ ಸಮಯದಲ್ಲೇ ಭೂಮಿಯು ಹೇಗಿರಬೇಕೆಂದು ದೇವರು ಬಯಸಿದ್ದಾನೊ ಹಾಗೇ ಬದಲಾಗುತ್ತದೆ, ಸರಿಯಾದ ಗೌರವನ್ನು ಕೊಡುವ ಸ್ಥಳವಾಗಿ ಬದಲಾಗುತ್ತದೆ.

## ಸರ್ವದೇಶ ರಾಜ್ಯಭಾರ :

“ಅವನು ಸಮುದ್ರದಿಂದ ಸಮುದ್ರದವರೆಗೂ, ಯೂಫ್ರಟೀಸ್ ನದಿಯಿಂದ ಭೂಮಿಯ ಕಟ್ಟಕಡೆಯವರೆಗೂ ಆಳಲಿ, ಎಲ್ಲಾ ಅರಸರೂ ಅವನಿಗೆ ಸಾಷ್ಟಾಂಗವೆರಗಲಿ; ಸರ್ವ ಜನಾಂಗಗಳು ಅವನನ್ನು ಸೇವಿಸಲಿ” (ಕೀ 72:8).

## ಸುಧಾರಣೆ :

“ನೀನು ಲೋಕದಲ್ಲಿ ನ್ಯಾಯ ಕಾರ್ಯಗಳನ್ನು ನಡಿಸುವಾಗ ಭೂನಿವಾಸಿಗಳು ಧರ್ಮ ಜ್ಞಾನವನ್ನು ಪಡೆದುಕೊಳ್ಳುವರು” (ಯೆಶಾಯ 26:9).



## ದುಷ್ಟರು ಅಡಗಿಕೊಳ್ಳಲು ಅಸಾಧ್ಯವಾದ ಸ್ಥಳ :

“ಕೆಡುಕರು ತೆಗೆದುಹಾಕಲ್ಪಡುವರು; ಯೆಹೋವನನ್ನು ನಿರೀಕ್ಷಿಸುವವರೇ ದೇಶವನ್ನು ಅನುಭವಿಸುವರು. ಇನ್ನು ಸ್ವಲ್ಪಕಾಲದೊಳಗೆ ದುಷ್ಟನು ಕಾಣಿಸದೆ ಹೋಗುವನು” (ಕೀರ್ತನೆ 37:9, 10).

## ನೀತಿಯುಳ್ಳ ರಾಜ್ಯಭಾರ :

“ಅವನು ನಿನ್ನ ಜನರಿಗೆ ನೀತಿಯಿಂದಲೂ ಕುಗ್ಗಿಹೋದ ನಿನ್ನವರಿಗೆ ನ್ಯಾಯವಾಗಿಯೂ ತೀರ್ಪು ಕೊಡಲಿ. ಅವನು ಬಡವರ ನ್ಯಾಯವನ್ನು ಸ್ಥಾಪಿಸಲಿ” (ಕೀರ್ತನೆ 72:2,4).

## ಯುದ್ಧಗಳು ನಿಂತು ಹೋಗುವುವು :

“ಆತನು ದೇಶದೇಶಗಳ ವ್ಯಾಜ್ಯಗಳನ್ನು ವಿಚಾರಿಸುವನು, ಬಹುರಾಷ್ಟ್ರದವರಿಗೆ ನ್ಯಾಯತೀರಿಸುವನು; ಅವರೋ ತಮ್ಮ ಆಯುಧಗಳನ್ನು ಕುಲುಮೆಗೆ ಹಾಕಿ ಕತ್ತಿಗಳನ್ನು ಗುಳಗಳನ್ನಾಗಿಯೂ ಬರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ” (ಯೆಶಾಯ 2:4)

## ಅಧಿಕವಾದ ಫಲಭರಿತವಾದ, ಸಮೃದ್ಧಿಯುಳ್ಳ ಸ್ಥಳ :

ದೇಶದಲ್ಲಿ ಬೆಟ್ಟಗಳ ಮೇಲೆಲ್ಲಾ ಬೆಳೆಯು ಸಮೃದ್ಧಿಯಾಗಲಿ; ಪೈರುಗಳ ಶಬ್ದವು ಲೆಬನೋನಿನ ಮರಗಳ ಸಪ್ಪಳದಂತಿರಲಿ, ಹೊಲದಲ್ಲಿ ಕಾಯಿಪಲ್ಯದಂತೆ ಪಟ್ಟಣಗಳಲ್ಲಿ ಜನರು ಹೆಚ್ಚಲಿ” (ಕೀರ್ತನೆ 72:16).

## ದೈವೀಕ ಯಾಜಕರು :

ನೀವು ಬಲಕ್ಕಾಗಲೀ ಎಡಕ್ಕಾಗಲೀ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವುದು. (ಯೆಶಾಯ 30:21).

## ದಿರ್ಘ ಆಯಸ್ಸು :

“ಒಬ್ಬನು ಕಟ್ಟಿದ ಮನೆಯಲ್ಲಿ ಬೇರೊಬ್ಬನು ವಾಸಿಸನು; ಒಬ್ಬನು ಮಾಡಿದ ತೋಟದ ಫಲವು ಇನ್ನೊಬ್ಬನಿಗೆ ವಶವಾಗದು; ನನ್ನ ಜನರ ಆಯುಸ್ಸು ವೃಕ್ಷದ ಆಯುಸ್ಸಿನಂತಿರುವುದು; ನನ್ನ ಆಪ್ತರು ತಮ್ಮ ಕೈಕೆಲಸದಿಂದ ಆದಾಯವನ್ನು ಪೂರಾ ಅನುಭವಿಸುವರು”(ಯೆಶಾಯ 65:22).

## ಭಾಷೆಯಲ್ಲೂ, ಧಾರ್ಮಿಕತ್ವದಲ್ಲೂ ಜನರ ಐಕ್ಯತೆ :

“ಆಗ ಎಲ್ಲರೂ ಒಂದೇ ಮನಸ್ಸಿನಿಂದ ಯೆಹೋವನನ್ನು ಸೇವಿಸಿ ಆತನ ಹೆಸರನ್ನೆತ್ತಿ ಪ್ರಾರ್ಥಿಸುವಂತೆ

ಜನಾಂಗಗಳವರ ತುಟಿಗಳನ್ನು ಮಾರ್ಪಡಿಸಿ ಶುದ್ಧಿ ಮಾಡುವೆನು"(ಚೆಫನ್ಯ 3:9).

**ಸಾವಿರ ವರ್ಷಗಳ ಆಳ್ವಿಕೆ ಲೋಕದ ಸುಧಾರಣೆ ಯುಗ :**

"ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಜನರು ಕೂತಿದ್ದರು; ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ, ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತುಹಾಕಿಸಿಕೊಳ್ಳದೆ ಇರುವವರನ್ನು ಕಂಡೆನು. ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು" (ಪ್ರಕಟನೆ 20:4).

**ಪುನರುತ್ಥಾನವೂ ಅದರ ಫಲವೂ!**

"ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು; ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕದಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು" (ಪ್ರಕಟನೆ 20:12).

**ಪರಿಣಾಮ :**

ದೇವರ ಕಾರ್ಯದ ಪರಿಣಾಮ ಭೂಮಿಯಲ್ಲಿ ಪುನರುತ್ಥಾನ ಹೊಂದಿವಾಸಿಸುವ ಎಲ್ಲರೂ ಎಂದೆಂದಿಗೂ ಮರಣ ಹೊಂದುವುದಿಲ್ಲ "ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲೀ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು ಎಂದು ಹೇಳಿತು" (ಪ್ರಕಟನೆ 21:4).

**ರಕ್ಷಣೆ ಹೊಂದಿದವರಿಗೆ ಆಯಾಸವಾಗದ ಬಲ :**

"ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಏರುವರು; ಓಡಿ ದಣಿಯರು, ನಡೆದು ಬಳಲರು" (ಯೆಶಾಯ 40:31).

**ನೆರವೇರುವಿಕೆ :**

"ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡು ಮಾಡುವುದಿಲ್ಲ, ಯಾರು ಹಾಳುಮಾಡುವುದಿಲ್ಲ ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು" (ಯೆಶಾಯ 11:9).

"ಯೆಹೋವನು ಭೂಲೋಕಕ್ಕೆಲ್ಲಾ ರಾಜನಾಗಿರುವನು; ಆ ದಿನದಲ್ಲಿ ಯೆಹೋವನೊಬ್ಬನೇ ದೇವರೆಂದೂ ಆತನ ಹೆಸರೊಂದೇ ಸುತ್ತವೆಂದೂ ಎಲ್ಲರಿಗೂ ತಿಳಿದಿರುವುದು" (ಜಕರ್ಯ 14:9).

"ನನ್ನ ಜೀವದಾಣೆ, ಮತ್ತು ಯೆಹೋವನ ಮಹಿಮೆಯು ಭೂಲೋಕದಲ್ಲೆಲ್ಲಾ ತುಂಬಿರಬೇಕೆಂಬುವ ನಿಶ್ಚಯ ವಾಕ್ಯದ ಆಣೆ" (ಅರಣ್ಯಕಾಂಡ 14:21).

ಸತ್ಯವೇದದ ಸಂತೋಷವನ್ನು ಉಂಟುಮಾಡುವ ದೇವರಾಜ್ಯದ ಸುವಾರ್ತೆಯನ್ನು ನಂಬುವವರು, ಯೇಸು ತಿರುಗಿ ಬರುವುದಕ್ಕಾಗಿ ಆಶಿಸಿ, ಆತನ ಬರೋಣದ ಗುರುತುಗಳಿಗಾಗಿ ಅತ್ಯಂತ ತವಕದಿಂದ ಕಾದಿರುವವರನ್ನು ನೋಡಿ ಚಕಿತರಾಗುವಿರೋ? ಯೇಸುವಿಗಾಗಿ ಎಚ್ಚತ್ತು ಕಾದುಕೊಂಡು ಬರುವಂತಹ ರಾಜ್ಯಕ್ಕಾಗಿ ಸಿದ್ಧರಾಗುತ್ತಾ ಇದ್ದೀರೋ?

***–ಡೆರಿಕ್ ಬ್ಯಾನ್ ಯಾರ್ಡ್***

–0–0–0–0–



# ಕುದಿಯುವ ಕೆಟಲನ್ನು ಶುದ್ಧಪಡಿಸುವಾಗ ........,

**(ಪ್ರತಿಬಿಂಬ)**

ಕುದಿಯುವ ಕೆಟಲನ್ನು ಯಾವಾಗಲೂ ಶುದ್ಧಪಡಿಸುವುದಕ್ಕಿಂತ ಅಧಿಕವಾದ ಗಮನವನ್ನು ಕೊಟ್ಟು ಶುದ್ಧಪಡಿಸುತ್ತಲಿದ್ದೆನು, ಆಗ ನನ್ನಲ್ಲಿ ಒಂದು ಯೋಚನೆ ಹುಟ್ಟಿತು. ನಾವು ಯಾಕೆ ಇಷ್ಟು ಕಷ್ಟಪಡಬೇಕು? ಯಾರೂ ಬಂದು ನನ್ನನ್ನು ಪ್ರೋತ್ಸಾಹ ಪಡಿಸುವುದಿಲ್ಲವಲ್ಲಾ.

ನನ್ನ ನೆನಪಿನಲ್ಲಿ ಒಂದು ಸತ್ಯವು ಉದ್ಭವಿಸಿತು. ಈಗ ನಾನು ಪಾತ್ರೆಯನ್ನು ಪಳಪಳವೆಂದು ಹೊಳೆಯುವ ಹಾಗೆ ಶುದ್ಧ ಮಾಡಿಬಿಟ್ಟರೆ?



ಮುಂದೆ ಅದನ್ನು ಉಪಯೋಗಿಸುವಾಗ ಮತ್ತೆ ಶುದ್ಧಪಡಿಸುವ ಅಗತ್ಯವಿಲ್ಲವಲ್ಲಾ, ಮತ್ತೆ ಅದನ್ನು ಗಮನಿಸದೇ ಬಿಟ್ಟು ಬಿಟ್ಟರೆ ಉಪಯೋಗಿಸುವುದಕ್ಕೆ ಸಾಧ್ಯವಾಗದೆ ಕೊಳಕಾಗಿಬಿಡಬಹುದು ಅಥವಾ ಅದರ ಮುಂದಿನ ಹೊಳಪನ್ನು ತರಲು ಬಹಳ ಸಮಯ ತೆಗೆದುಕೊಳ್ಳಬಹುದು.

ನಮ್ಮ ಜೀವಿತದಲ್ಲಿ ಸತ್ಯವನ್ನು ಹಿಂಬಾಲಿಸುವಾಗಲೂ ಇದೇ ಸತ್ಯವಾಗಿದೆ, ಸ್ವಲ್ಪದಾರಿಯನ್ನು ಬಿಟ್ಟು ಅಗಲುವ ನಾವು, ಇದು ಸುಲಭವಾದದ್ದು, ಇದರಿಂದ ಯಾರಿಗೂ ಕೆಡುಕು ಉಂಟಾಗುವುದಿಲ್ಲ ಎಂದು ನೆನಸಬಹುದು. ಹಾಗೆಯೇ ಇನ್ನೂ ಸ್ವಲ್ಪ ದಾರಿ ಬಿಟ್ಟು ಅಗಲುತ್ತೇವೆ, ಕೊನೆಗೆ ನಾವು ಪ್ರಕಾಶ ಹೊಂದಲಾರದವರಾಗುತ್ತೇವೆ. ಮೊದಲು ಪ್ರಕಾಶವಾಗಿದ್ದ ಜೀವಿತದೊಳಗೆ ಮತ್ತೊಮ್ಮೆ ಬರಲು ಅಸಾಧ್ಯವಾಗಿ ಹೋಗಿ ಬಿಡುತ್ತೇವೆ.

ಕರುಣೆಯುಳ್ಳ ನಮ್ಮ ದೇವರಿಗೆ ನಾವು ಧನ್ಯವಾದಗಳನ್ನು ಸಲ್ಲಿಸೋಣ, ಆತನು ಎಂದಿಗೂ ನಮ್ಮ ವಿಷಯದಲ್ಲಿ ನಂಬಿಕೆ ಬಿಟ್ಟು ನಮ್ಮನ್ನು ಕೈಬಿಡುವುದಿಲ್ಲ. ಆದ್ದರಿಂದಲೇ ನಾವು ನಿಜವಾಗಿಗೂ ನಮ್ಮ ವಿಶ್ವಾಸದಲ್ಲಿ ಪ್ರಕಾಶಿಸಲು ಆಶಿಸಿ, ಆತನ ಕ್ಷಮೆಯಲ್ಲಿ ಭಾಗಿಗಳಾದರೆ, ನಾವೂ ಕೆಟ್ಟ ಅಭ್ಯಾಸಗಳನ್ನು ತೊಲಗಿಸಿ ನಮ್ಮ ಜೀವಿತವನ್ನು ಶುದ್ಧೀಕರಿಸಿ ಪ್ರಕಾಶಿಸುವಂತೆ ಮಾಡೋಣ.

ಹೌದು, ನಾನು ಕೆಟಲ್ ಆಗಿ ಟೀ, ಕಾಫಿ ಮಾಡುವ ಪಾತ್ರೆಯಂತೆ ನಮ್ಮ ಜೀವಿತದ ಮಾರ್ಗದಲ್ಲಿ ನಡೆಯುತ್ತಿರುವಾಗ ನಮ್ಮನ್ನು ಶುದ್ಧೀಕರಿಸಲು ಒಪ್ಪಿಸೋಣ. ಯಾರಿಗೆ ಗೊತ್ತು, ನಮ್ಮ ಆಕಸ್ಮಿಕ ಅಥಿತಿ ಯೇಸು ಕ್ರಿಸ್ತನಾಗಿಯೇ ಇರಬಹುದಲ್ಲವೇ?

***–ಒಬ್ಬ ಸಹೋದರಿ.***

–0–0–0–0–

# ವಿವಾಹ ವಿಚ್ಛೇದನದ ಬಗ್ಗೆ ಕ್ರೈಸ್ತ ಉಪದೇಶ

"ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನಂದರೆ ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು; ಒಂದುವೇಳೆ ಅಗಲಿದರೂ ಪುರುಷ ಸಹವಾಸವಿಲ್ಲದ ಇರಬೇಕು, ಇಲ್ಲವೇ ಗಂಡನ ಸಂಗಡ ಸಮಾಧಾನವಾಗಬೇಕು; ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು" (1ಕೊರಿಂಥ 7:10–11).

ಕ್ರಿಸ್ತನಲ್ಲಿರುವ ಸಹೋದರ ಸಹೋದರಿಯರ ಮಧ್ಯದಲ್ಲಿ ವಿವಾಹ ವಿಚ್ಛೇದನವೆಂಬುದು ಕ್ರೈಸ್ತ ಕಟ್ಟಳೆಗಳಿಗೆ ವಿರುದ್ಧವಾದುದಾಗಿದೆ. ವಿಶ್ವಾಸಿಯೊಬ್ಬನು ವಿವಾಹ ವಿಚ್ಛೇದನೆಯನ್ನು ಮಾಡಿದರೆ ಸಂಧಾನವಾಗುವ ಸಂದರ್ಭವಿರುವ ವರೆಗೆ ಮರುವಿವಾಹಕ್ಕೆ ಸ್ಥಳವೇ ಇಲ್ಲ.

"ಹೀಗೆ ಆ ಮನುಷ್ಯನು ಎಲ್ಲಾ ಪಶುಗಳಿಗೂ ಆಕಾಶದ ಪಕ್ಷಿಗಳಿಗೂ ಕಾಡು ಮೃಗಗಳಿಗೂ ಹೆಸರಿಟ್ಟನು. ಆದರೆ ಆ ಮನುಷ್ಯನಿಗೆ ಸರಿಬೀಳುವ ಸಹಕಾರಿ ಕಾಣಿಸಲಿಲ್ಲ. ಹೀಗಿರುವಲ್ಲಿ ಯೆಹೋವದೇವರು ಆ ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗ ಮಾಡಿ ಆಕೆಯನ್ನು ಅವನ ಬಳಿಗೆ ಕರತಂದನು. ಅವನು ಆಕೆಯನ್ನು ನೋಡಿ ಈಗ ಸರಿ; ಈಕೆಯು ನನ್ನ ಎಲುಬುಗಳಿಂದ ಬಂದ ಎಲಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ; ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರಿ ಎನಿಸಿಕೊಳ್ಳುವವಳು ಅಂದನು. ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು ಆ ಸ್ತ್ರೀಪುರುಷರಿಬ್ಬರೂ ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ" (ಆದಿಕಾಂಡ 2:20–25).

"ಆಗ ಫರಿಸಾಯರು ಆತನ ಹತ್ತಿರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂದು ಯೋಚನೆಯಿಂದ ಒಬ್ಬನು ಯಾವನಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟುಬಿಡುವುದು ಧರ್ಮವೋ ಹೇಗೆ ಎಂದು ಕೇಳಿದ್ದಕ್ಕೆ, ಆತನು ಮನುಷ್ಯರನ್ನು ನಿರ್ಮಾಣ ಮಾಡಿದವನು ಆದಿಯಿಂದಲೇ ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿ ಅವರ ವಿಷಯದಲ್ಲಿ ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಹೇಳಿದನೆಂಬದಾಗಿ ನೀವ ಓದಲಿಲ್ಲವೋ? ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ ಒಂದೇ ಶರೀರವಾಗಿದ್ದಾರೆ. ಆದದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು ಅಂದನು" (ಮತ್ತಾಯ 19:3–6).




ಪುರುಷನೂ ಸ್ತ್ರೀಯೂ ಜೀವನ ಪೂರ್ತಿ ಒಂದಾಗಿರಲಿಕ್ಕಾಗಿಯೇ ಜೋಡಿಸಲ್ಪಟ್ಟಿರುತ್ತಾರೆ ಎಂಬುದೇ ದೇವರ ಉದ್ದೇಶ. ಇಬ್ಬರಲ್ಲಿ ಒಬ್ಬರ ಮರಣವು ಮಾತ್ರವೇ ಈ ಜೋಡಣೆಗೆ ಒಂದು ಅಂತ್ಯ ತರುತ್ತದೆ. ಇದಕ್ಕೆ ಹಲವಾರು ಕಾರಣಗಳನ್ನು ಕಂಡು ಹಿಡಿಯುವುದು ಬಹಳ



ಸುಲಭವಾದುದು. ಹವ್ವಳು ಸೃಷ್ಟಿಸಲ್ಪಟ್ಟ ರೀತಿಯು "ಈಕೆಯು ನನ್ನ ಎಲುಬುಗಳಿಂದ ಬಂದ ಎಲಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ" ಈ ಬಂಧವನ್ನು ಮುರಿಯುವುದು ಅಸಾಧ್ಯ. ಮನುಷ್ಯನ ಮನಸ್ಸೂ ಸನ್ಮಾರ್ಗ ಗುಣಗಳೂ ಈ ಜೋಡಣೆಯ ಅಗತ್ಯವೆನ್ನುತ್ತದೆ, ಮಾತ್ರವಲ್ಲದೆ ಸಂತತಿಯು ಬೆಳೆಯಬೇಕೆಂಬ ಉದ್ದೇಶವು ಇಬ್ಬರನ್ನೂ ಈ ಜೋಡಣೆಯಲ್ಲಿರುವಂತೆ ಎದಿರುನೋಡುತ್ತದೆ.

ಯಾವಾಗಲಾದರೂ, ಎಲ್ಲಾದರೂ ಜೀವನ ಸಂಗಾತಿಯ ಕಹಿಯೂ, ಹಗೆಯೂ ಉಂಟಾಗಿ ಗಂಡಹೆಂಡರಲ್ಲಿ ಅಗಲುವ ಸ್ಥಿತಿ ಉಂಟಾಗುವಾಗ, ಅಂತಹ ಕಾರ್ಯಗಳನ್ನು ಸತ್ಯವೇದವು ನಮ್ಮಲ್ಲಿಡುವ ಉನ್ನತವಾದ ನಡತೆಯ ಅಳತೆಗೆ ಒಪ್ಪಿಸಲ್ಪಟ್ಟಿಲ್ಲ. ಅಲ್ಲಿ ಕ್ರೈಸ್ತ ಕರ್ತವ್ಯವು ಎಂದಿನಂತೆಯೇ ಹಳೆಯ ಸಂದರ್ಭವನ್ನು ನೂತನಪಡಿಸಲು ಆಶಿಸಬೇಕು.

ಇದು ಗಂಡಹೆಂಡತಿಗೂ, ಹೆಂಡತಿಗಂಡನಿಗೂ ಮಾತ್ರವಿರುವ ಕರ್ತವ್ಯವಲ್ಲ. ತಾಳ್ಮೆಯಿಂದ ಅರ್ಥಮಾಡಿಕೊಂಡು ಜ್ಞಾನದಿಂದ ಬುದ್ಧಿಹೇಳುವವರ ಕರ್ತವ್ಯವೂ ಆಗಿರುತ್ತದೆ. ಎಲ್ಲಿ ಕಹಿಭಾವನೆಯೂ, ಹಗೆಯೂ ಉಂಟಾಗಿ ಬೇರ್ಪಡುವ ಸ್ಥಿತಿಗೆ ಬಂದುಬಿಟ್ಟಿದ್ದರೂ, ಮತ್ತೊಮ್ಮೆ ಜೋಡಿಸಲ್ಪಡಬಹುದಾದ ಸಾಧ್ಯತೆ ಇರುವುದಾದರೆ ವಿವಾಹ ವಿಚ್ಛೇದನೆಯನ್ನು ಕೇಳಿಕೊಳ್ಳುವುದು, ಮರುವಿವಾಹ ಮಾಡಿಕೊಳ್ಳುವುದೂ ಕರ್ತನ ಬೋಧನೆಯನ್ನು ತ್ಯಜಿಸುವಂಥದ್ದಾಗಿರುತ್ತದೆ. ಯಾಕಂದರೆ ಇಂತಹ ತೀರ್ಪಿನಲ್ಲಿ ಸಂಧಾನವಾಗುವ ಸಾಧ್ಯತೆಗೆ ಸ್ಥಳವೇ ಇರುವುದಿಲ್ಲ. ಮಕ್ಕಳಿರುವ ಕುಟುಂಬದಲ್ಲೂ ವಿವಾಹ ವಿಚ್ಛೇದನಕ್ಕೆ ಅನುಮತಿ ಇರುವುದಿಲ್ಲ.

"ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಆಕೆಗೆ ತ್ಯಾಗ ಪತ್ರವನ್ನು ಕೊಡತಕ್ಕದೆಂದು ಹೇಳಿದೆಯಷ್ಟೆ. ಆದರೆ ನಾನು ನಿಮಗೆ ಹೇಳುವುದೇನಂದರೆ ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ, ಮತ್ತು ಗಂಡ ಬಿಟ್ಟವಳನ್ನು ಮದುವೆ ಮಾಡುಕೊಳ್ಳುವವನು ವ್ಯಭಿಚಾರ ಮಾಡಿದವನಾಗಿದ್ದಾನೆ" (ಮತ್ತಾಯ 5:31–32).

"ಅವರು ಆತನನ್ನು ಹಾಗಾದರೆ ತ್ಯಾಗಪತ್ರವನ್ನು ಕೊಟ್ಟು ಆಕೆಯನ್ನು ಬಿಟ್ಟುಬಿಡಬಹುದೆಂದು ಮೋಶೆಯು ಯಾಕೆ ಆಜ್ಞೆ ಕೊಟ್ಟನು ಎಂದು ಕೇಳಲು ಆತನು ಮೋಶೆಯು ನಿಮ್ಮ ಮೊಂಡತನವನ್ನು ನೋಡಿ ನಿಮ್ಮ ಹೆಂಡರನ್ನು ಬಿಟ್ಟು ಬಿಡುವುದಕ್ಕೆ ಅಪ್ಪಣೆ ಕೊಟ್ಟನು; ಆದರೆ ಆದಿಯಿಂದಲೇ ಹಾಗೆ ಇರಲಿಲ್ಲ ಮತ್ತು ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು"(ಮತ್ತಾಯ 19:7–9).

ಯೇಸುವು ಅನುಮತಿ ನೀಡಿದ ಕಾರಣವಲ್ಲದ ಇತರ ಕಾರಣಗಳಿಗಾಗಿ ಸಹೊದರನೋ, ಸಹೋದರಿಯೋ ನೀಡುವ ವಿವಾಹ ವಿಚ್ಛೇದನೆಯು ಪಾಪವೇ. ಇದನ್ನು ಸುಮ್ಮನೆ ಬಿಟ್ಟು ಬಿಡಲಾಗದು, ಅದೇ ಸಂದರ್ಭದಲ್ಲಿ ಆಳವಾಗಿ ಮನತಿರುಗುವುದಕ್ಕೆ ಬೇಕಾದ ಸಂದರ್ಭಗಳನ್ನು ಸಭೆಯು ತಡೆಹಿಡಿಯಬಾರದು. ವಿವಾಹ ವಿಚ್ಛೇದನ ಮಾಡಿದವರನ್ನು ಮರುವಿವಾಹ ಮಾಡುವುದೋ, ವಿವಾಹ ಮಾಡಿಕೊಳ್ಳುವುದಾಗಲೀ ಕ್ರಿಸ್ತನು ಹೇಳಿದ್ದ ಅಳತೆಗಳಿಗೆ ಅನುಗುಣವಾಗಿ ಸಭೆಯು(ಎಕ್ಲೆಷಿಯಾ) ನಡೆದುಕೊಳ್ಳಬೇಕು.

ಉನ್ನತ ದೈವೀಕ ಅಳತೆಯಲ್ಲಿ ಇಲದವರಿಗೆ ಬುದ್ಧಿಹೇಳಿ ಗದರಿಸುವುದು ನಮ್ಮ ಗುರಿಯಾಗಿರಬೇಕು. ಕ್ರಿಸ್ತನ ಉನ್ನತ ವಿಶೇಷವಾದ ಅಳತೆಗಳನ್ನು ಪೂರ್ಣವಾಗಿ ಕಾದುಕೊಳ್ಳಲು ಪ್ರಯತ್ನಿಸುವಾಗ, ಆ ಅಳತೆಗಳನ್ನು ಮೀರುವವರನ್ನು ಕುರಿತ ಮನೋಭಾವದಲ್ಲಿ ತಪ್ಪು ಮಾಡದಂತೆ ಜಾಗ್ರತೆಯಿಂದಿರಬೇಕು, ದೇವರು ಅವರನ್ನು ನ್ಯಾಯತೀರಿಸುವನು. ಆ ಕಾರ್ಯಗಳಲ್ಲಿ ಸರಿಯಾದ ಸ್ಥಿತಿಯಲ್ಲಿ ಕರ್ತನ ಬೋಧನೆಯ ತಳಹದಿಯಲ್ಲಿ ಜೀವಿಸಲು ಪ್ರಾರ್ಥನಾಪೂರ್ವಕವಾದ ಪ್ರಯತ್ನವೂ, ತಾಳ್ಮೆಯುಳ್ಳ ಮನೋಭಾವವೂ ಅಗತ್ಯವಾದದ್ದು.

–0–0–0–0–

# ಬ್ಯಾಬಿಲೋನ್ ದೇಶದ ಬೆಲ್ತ್ಶಚ್ಚರನು



ಬ್ಯಾಬಿಲೋನಿನ ಅರಸನಾದ ಬೆಲ್ತ್ಶಚ್ಚರನು ಒಂದು ಔತಣವನ್ನು ಏರ್ಪಡಿಸಿದನು. ಯೆರೂಸಲೇಮಿನಲ್ಲಿದ್ದ ಯೆಹೋವನ ಆಲಯದಿಂದ ತೆಗೆದುಕೊಂಡು ಬಂದಿದ್ದ ಪಾತ್ರೆಗಳಲ್ಲಿ ಕುಡಿದು, ಅನ್ಯದೇವತೆಗಳನ್ನು ಹೊಗಳಿದನು. ಆಗ ಮನುಷ್ಯನ ಹಸ್ತದಂತಿರುವ ಒಂದು ಹಸ್ತವು ಕಾಣಿಸಿಕೊಂಡು ಗೋಡೆಯ ಮೇಲೆ "ಅವನ ರಾಜ್ಯವು ತಕ್ಕಡಿಯಲ್ಲಿ ತೂಗಲ್ಪಟ್ಟು, ಅಂತ್ಯವಾಗಲಿದೆ" ಎಂದು ಬರೆಯಿತು. ಈ ವಿಷಯವು ದಾನಿಯೇಲ 5ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ.

"ನ್ಯೂನ್ಯತೆಗಳನ್ನು ಹೇಳುವ ಮೇಧಾವಿಗಳು" ಎಂಬುವರಲ್ಲಿ, ಡೀನ್ ಫರಾರ್(1831–1903) ಎಂಬುವರು ಬೆಲ್ತ್ಶಚ್ಚರನ ಬಗ್ಗೆ ಸತ್ಯವೇದದಲ್ಲಿ ಹೇಳಲ್ಪಟ್ಟಿದ್ದು ಕಟ್ಟುಕಥೆ ಎಂದು ಗೇಲಿ ಮಾಡಿದ್ದಾರೆ. "ಬೆಲ್ತ್ಶಚ್ಚರನೆಂಬ ಅರಸನೇ ಇದ್ದಿಲ್ಲ" ಎಂದೂ ಫರಾರ್ ಹೇಳಿದ್ದಾರೆ. ಪ್ರೊಫೆಸರ್ ಸೇಯ್ಸ್ ಎಂಬುವರು– "ಗೋಡೆಯಲ್ಲಿ ಬರೆಯಲ್ಪಟ್ಟದ್ದನ್ನು ದಾನಿಯೇಲನು ಬೇರೆರೀತಿಯಲ್ಲಿ ಹೇಳಿದ್ದಾನೆ" ಎಂದಿದ್ದಾರೆ. ಪಂಡಿತರಿಗೆ ಸತ್ಯವೇದದ ಬಗ್ಗೆ ಇಂತಹ ಕುರುಡುತನವಾದ ಹಗೆಯಿದೆ, ಬರೆಯಲ್ಪಟ್ಟದ್ದು ಸತ್ಯವೇದದಲ್ಲಿ ಹೇಳಲ್ಪಟ್ಟದ್ದಕ್ಕಿಂತ ಬೇರೆ ರೀತಿಯಲ್ಲಿದ್ದರೆ ಸತ್ಯವೇದವನ್ನು ತಪ್ಪೆನ್ನಬಹುದು.





ದಾನಿಯೇಲ ಪ್ರವಾದಿಗೆ ವಿರೋಧವಾದ ಈ ತಪ್ಪಾದ ಅಭಿಪ್ರಾಯವು ಮೂಢತನವಾದ ಊಹೆಗಳೆಂಬುದಾಗಿ ಪರಿಗಣಿಸಲ್ಪಟ್ಟಿವೆ. ಸತ್ಯವೇದದಲ್ಲಿ ಹೇಳಲ್ಪಟ್ಟ ಬೆಲ್ತ್ಶಚ್ಚರನ ತಂದೆಯಾದ ನೆಬೋನಿಡಸ್ ಎರಡು ಸುರುಳಿ(ಉರುಳೆ)ಗಳಲ್ಲಿ ಮುದ್ರಿತವಾದ ಬರವಣಿಗೆಗಳನ್ನು ಸಂಶೋಧಿಸಿದ್ದಾರೆ. ಅವುಗಳನ್ನು 1854ರಲ್ಲಿ ಸರ್ ಹೆನ್ರಿ ರಾಲಿನ್ಸ್ ಎಂಬುವರಿಂದ ಕಂಡು ಹಿಡಿಯಲ್ಪಟ್ಟು 1856ರಲ್ಲಿ ಭಾಷಾಂತರಿಸಲ್ಪಟ್ಟಿತು. 1880ರಲ್ಲಿ ಮೊಟ್ಟಮೊದಲನೆಯದಾಗಿ ಪ್ರಕಟಿಸಲ್ಪಟ್ಟಿತು. ಅದರಲ್ಲಿರುವ ಬರಹವು ಹೀಗೆ ಹೇಳುತ್ತದೆ.



"ಬ್ಯಾಬಿಲೋನಿನ ರಾಜನಾದ ನೆಬೋನಿಡಸ್ ಆದ ನಾನು ನನ್ನನ್ನು ಉನ್ನತವಾದ ದೇವರಿಗೆ ವಿರೋಧವಾಗಿ ಪಾಪ ಮಾಡದಂತೆ ಕಾದುಕೊಳ್ಳಲಿ. ಕೃಪೆಯಾಗಿ ನನಗೆ ಧೀರ್ಘಾಯುಸ್ಸನ್ನು ಅನುಗ್ರಹಿಸು. ಬೆಲ್ತ್ಶಚ್ಚರನೆಂಬ ನನ್ನ ಮಗನಿಗೆ, ನನ್ನ ಮೊದಲ ಮಗನಿಗೆ, ನನ್ನ ಸೊಂಟದಿಂದ ಹುಟ್ಟಿದವನ ಮನಸ್ಸಿನಲ್ಲಿ ಉನ್ನತವಾದ ದೇವರ ಕುರಿತ ಭಯವನ್ನು ಕೊಡು. ಹಾಗೆ ನೀನು ಮಾಡಿದ್ದೀಯಾದರೆ ಅವನು ಪಾಪವನ್ನೇ ಮಾಡನು, ಅವನು ಪಾಪ ಮಾಡದಿರುವುದಕ್ಕೂ, ಜೀವಿತದ ಭವಿಷ್ಯದಲ್ಲಿ ತೃಪ್ತಿಯಾಗಿ ಇರುವುದಕ್ಕೂ ಸಹಾಯವನ್ನನುಗ್ರಹಿಸು".



ಇಂದು ಈ ಸುರುಳಿಗಳು ಇಂಗ್ಲೆಂಡಿನ ಲಂಡನ್ ನಲ್ಲಿರುವ ಬಿಟಿಷ್ ವಸ್ತು ಪ್ರದರ್ಶನಾಲಯದಲ್ಲಿ ಇವೆ. ಮನುಷ್ಯನ ಬುದ್ಧಿಹೀನತೆಗೂ, ಸತ್ಯವೇದ ವಾಕ್ಯಗಳು ಸಲ್ಪವೂ ತಪ್ಪು ಮಾಡದವುಗಳಾಗಿವೆ ಎಂಬುದಕ್ಕೂ ಅವು ಸಾಕ್ಷಿಯಾಗಿವೆ. ಈಗ ಬ್ಯಾಬಿಲೋನಿನ ಪುರವಲಯದ ಭಾಗಗಳಲ್ಲಿ ಮಣ್ಣಿನ ಹೂಜಾಡಿಗಳು ಕಂಡುಹಿಡಿಯಲ್ಪಟ್ಟವು, ಆ ತಟ್ಟೆಗಳಲ್ಲಿ ಬೆಲ್ತ್ಶಚ್ಚರನ ಕಾರ್ಯದರ್ಶಿಗಳನ್ನು, ಅರಮನೆ ಕೆಲಸದವರನ್ನೂ ತೋರಿಸಿದವು.

ಹೌದು! ಬೆಲ್ತ್ಶಚ್ಚರನು ಜೀವಿಸಿದ್ದನು.



# ತಪ್ಪಿಹೋದ ಮಗನು

"ನಿನ್ನ ತಮ್ಮ ಸತ್ತವನಾಗಿದ್ದನು, ತಿರುಗಿ ಬದುಕಿ ಬಂದನು; ಕಳೆದು ಹೋಗಿದ್ದನು ಸಿಕ್ಕಿದ್ದಾನೆ" (ಲೂಕ 15:32).

ಫರಿಸಾಯರೂ, ಶಾಸ್ತ್ರಿಗಳೂ "ಇವನು ಪಾಪಿಗಳನ್ನು ಸೇರಿಸಿಕೊಂಡು ಅವರಜೊತೆಯಲ್ಲಿ ಊಟಮಾಡುತ್ತಾನೆ" ಎಂದು ಗುಣುಗುಟ್ಟಿದಾಗ ಯೇಸು ಅವರಿಗೆ ಉತ್ತರಕೊಟ್ಟು ಹೇಳಿದ ಮೂರು ಸಾಮ್ಯಗಳಲ್ಲಿ "ತಪ್ಪಿಹೋದ ಮಗನ" ಬಗ್ಗೆ ಹೇಳಿದ ಸಾಮ್ಯವು ಕೊನೆಯದು. ಯೇಸುಕ್ರಿಸ್ತನ ಕಾರ್ಯಗಳೆಲ್ಲವನ್ನೂ ನಕಾರಾತ್ಮಕ ಮನೋಭಾವನೆಯಿಂದಲೇ ಇಸ್ರಯೇಲಿನ ಹಿರಿಯರು ನೋಡಿದರು. ಸುಂಕದವರೂ, ಹಲವಾರು ಬಗೆಯ ಪಾಪಿಗಳು ಜೊತೆಗಾರರಾಗಲು ಯೋಗ್ಯರಾದವರಲ್ಲ ಎಂದು ನೆನಸಿದರು. ತಾವು ಮೈಲಿಗೆ ಮಾಡಿಕೊಳ್ಳಲಾಗದು ಎಂಬುದು ಮಾತ್ರವೇ ಅವರ ತತ್ವವಾಗಿತ್ತು.



ಕೆಟ್ಟುಹೋದ ಪಾಪಿಗಳನ್ನು ಹುಡುಕಿ ಅವರನ್ನು ತಿರುಗಿ ಮಂದೆಯೊಳಗೆ ಸೇರಿಸಬೇಕಾದ ಮಾರ್ಗವನ್ನು ಕಂಡುಹಿಡಿಯಲು ಸಹಾಯ ಮಾಡಬೇಕು ಎಂಬ ಜವಾಬ್ದಾರಿ ತಮಗೆ ಇರುವುದರ ಬಗ್ಗೆ ಅವರಿಗೆ ಯಾವ ಯೋಚನೆಯೂ ಇರಲಿಲ್ಲ.

ತಮಾಷೆಯೆಂದರೆ, ಸಂಪ್ರದಾಯ ಕ್ರೈಸ್ತರ ನೋಟವು ಈ ಸಾಮ್ಯದಲ್ಲಿನ ಅರ್ಥವನ್ನು ಮುಖ್ಯವೆಂದು ಪರಿಗಣಿಸುತ್ತದೆ. ಆಂಗ್ಲಭಾಷೆಯ ಒಂದು ಭಾಷಾಂತರವು ಈ ಸಾಮ್ಯಕ್ಕೆ "ಕೆಟ್ಟಕುಮಾರ"ನೆಂಬ ಬಿರುದನ್ನು ಕೊಟ್ಟಿರುತ್ತದೆ. ಇನ್ನೊಂದು ಭಾಷಾಂತರವು ಇದನ್ನು "ತಪ್ಪಿ ಹೋದ ಮಗನ ಸಾಮ್ಯ" ಎಂದು ಹೇಳುತ್ತದೆ. ಆದರೆ ಇದರ ಮುಖ್ಯ ತತ್ವವನ್ನು ಸಾಮ್ಯದ ಅಂತ್ಯದಲ್ಲಿ "ಸಿಕ್ಕಿದನು" ಅಥವಾ "ಕಂಡುಕೊಳ್ಳಲ್ಪಟ್ಟನು" ಎಂದು ಹೇಳುತ್ತದೆ (ಲೂಕ 15:32). ಆದ್ದರಿಂದಲೇ ನಾವು ಈ ಸಾಮ್ಯಕ್ಕೆ "ಕಂಡುಹಿಡಿಯಲ್ಪಟ್ಟ ಮಗನು" ಅಥವಾ "ಸಿಕ್ಕಿದ ಮಗನು" ಎಂಬ ಶಿರೋಲೇಖವನ್ನು ಸಹ ಇಟ್ಟುಕೊಳ್ಳಬಹುದು. ಲೂಕ 15ನೇ ಅಧ್ಯಾಯದಲ್ಲಿರುವ ಮೂರು ಸಾಮ್ಯಗಳಲ್ಲೂ ತಿಳಿಸುವ ಮುಖ್ಯವಾದ ಕಾರ್ಯವೆಂದರೆ, ಪುನರ್ಸ್ಥಾಪನೆ– ಕಳೆದು ಹೋದ ಕುರಿ, ಪಾವಲಿ ಮತ್ತು ಮಗನನ್ನು ಹುಡುಕಿ ಕಂಡುಹಿಡಿದು ಪುನರ್ ಸ್ಥಾಪಿಸುವುದು. ಈ ಸಾಮ್ಯಗಳು ನಮ್ಮನ್ನು ಹೊಸಸೃಷ್ಟಿಯೆಡೆಗೆ ನಡೆಸುವ ಬಲವುಳ್ಳ ಪಾಠಗಳನ್ನು ಯೇಸುಕ್ರಿಸ್ತ ಈ ಸಾಮ್ಯಗಳ ಮೂಲಕ ಬೋಧಿಸಿದ್ದಾನೆ.

## ನಮನ್ನೂ ಸಂಬಂಧಪಡಿಸಬಹುದು :–

ಈ “ಕಂಡುಕೊಳ್ಳಲ್ಪಟ್ಟ ಮಗನ” ಸಾಮ್ಯವು ಬಲವಾಗಿ ಮನೋಶಕ್ತಿ0ಯನ್ನು ತಟ್ಟುವಂತಹದು ಆಗಿದೆ. ನಮಲ್ಲಿ 0ಯಾರಾದರೂ ಒಬ್ಬರು ತನ್ನ ಮಗ, ಜೀವನ ಸಂಗಾತಿ, ರಕ್ತ ಸಂಬಂಧಿಗಳು ಅಥವಾ ಸ್ನೇಹಿತರು ಸುವಾರ್ತೆಗೆ ಸ್ಥಳಕೊಡದೆ ಕೆಟ್ಟು ಹೋಗಿದ್ದರೆ, ಇಂತಹ ಸನ್ನಿವೇಶವು ಕೊಡುವ ದುಃಖಕರವಾದ ವೇದನೆ0ಯನ್ನು ಅರ್ಥ ಮಾಡಿಕೊಳ್ಳಬಹುದು. ರಬ್ಬಿಗಳು ಬರೆದವುಗಳಲ್ಲಿ ಇಂತಹ ಒಂದು “ಕೆಟ್ಟಕುಮಾರನ” ಕಥೆಯಿದೆ, ಅವನೂ ದುಷ್ಟತನದಲ್ಲೇ ಬೆಳೆದು ತನ್ನ ಆಸ್ತಿ0ಯನ್ನು ಹಾಳುಮಾಡಿದನು. ಆದರೆ ಈ 0ಯೆಹೂದ ಸಾಮ್ಯದಲ್ಲಿನ ಅಂತ್ಯವು ಪರಿಣಾಮವೂ ಅದಕ್ಕಿಂತ ವ್ಯತ್ಯಾಸವಾದದ್ದಾಗಿದೆ.

## ತಾನು ಬ0ಯಸಿದ್ದನ್ನು ಮಗನು ಹೊಂದಿದನು :–

ಒಬ್ಬ ಮನುಷ್ಯನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಕಿರಿ0ಯ ಮಗನು ತನಗೆ ಬರಬೇಕಿದ್ದ ಸೊತ್ತನ್ನು ತಕ್ಷಣವೇ ಭಾಗ ಮಾಡಿಕೊಡಬೇಕೆಂದು ಕೇಳಿದನು; ಕಿರಿ0ಯ ಮಗನಾಗಿ ಅವನಿಗೆ ಆಸ್ತಿ0ಯಲ್ಲಿ ಮೂರನೇ ಒಂದು ಭಾಗ ಮಾತ್ರವೇ ದಕ್ಕಬೇಕಿತ್ತು. ಹಿರಿ0ಯವನಿಗೆ ಧರ್ಮಶಾಸ್ತ್ರದ ಪ್ರಕಾರ ಎರಡು ಭಾಗದ(ಧರ್ಮೋಪದೇಶ ಕಾಂಡ 21:17) ಸೊತ್ತನ್ನು ಹೊಂದಲು ಅವನಿಗೆ ಹಕ್ಕು ಇತ್ತು.

ಕಿರಿ0ಯ ಮಗನ ಕ್ರಿ0ಯೆಗಳಿಗೆ ಅವನು ತಾನೇ ಜವಾಬ್ದಾರಿ. ಅವನು ಏನನ್ನು ಬ0ಯಸಿದ್ದನೋ ಅದನ್ನು ಹೊಂದಿದನು, ಹಾಗೆ ಅವನು ಪಡಕೊಂಡದ್ದು ಅವನನ್ನು ಹೆಚ್ಚುಕಡಿಮೆ ಮರಣದವರೆಗೂ ಕೊಂಡೊಯ್ದಿತು.

## ಮುಂದೆಬರುವ ದುರ್ದೆಶೆ :–

ಕಿರಿ0ಯ ಮಗನ ಈ ಕಾರ್ಯವು ಅವನ ಸ್ವಂತ ಆಸೆಯಿಂದ ಮಾಡಿದ್ದಾಗಿದ್ದು, ಇದು ಅವನ ಬೀಳುವಿಕೆ ಕಾರಣವಾಯಿತು. ಅವನು ತನ್ನ ತಂದೆ0ಯ ಮನೆ0ಯನ್ನು ಬಿಟ್ಟು ಹೋದನು, ತಂದೆ0ಯ ಮನೆ0ಯ ಶಿಸ್ತಿನೊಳಗೆ ಇರಲಿಕ್ಕೆ ಇಷ್ಟವಾಗಿರಲಿಲ್ಲ. ಅದು ಮಾತ್ರವಲ್ಲದೆ ಅವನು “ದೂರದೇಶಕ್ಕೆ” ಹೊರಟು ಹೋದನು. ಅಲ್ಲಿ ತನ್ನ ತಂದೆ0ಯ ಶಿಸ್ತು ಅವನ ಮೇಲೆ ಇರಲಿಕ್ಕಿಲ್ಲವೆಂದು ನೆನಸಿದನು. ತನಗಿದ್ದ ಎಲ್ಲವನ್ನೂ ಖರ್ಚು ಮಾಡಿಬಿಟ್ಟನು. ಭವಿಷ್ಯಕ್ಕಾಗಿ 0ಯಾವುದನ್ನೂ ಇಟ್ಟುಕೊಳ್ಳದ್ದರಿಂದ ನಿಜವಾಗಿ0ಯೂ ಅವನು ಅನೇಕ ಅವಶ್ಯಕತೆಗಳನ್ನು ಸಂಧಿಸಬೇಕಿದ್ದಿತು.

ಈ ಸಾಮ್ಯವು ನಮ್ಮ ಕಾಲಕ್ಕೆ ಸರಿ0ಯಾಗಿ ಹೊಂದಿಕೆ0ಯಾಗುವಂತೆ0ಯೇ ಇದೆ. ಸುಲಭದಲ್ಲಿ ಸಾಲ ದೊರಕುವ(ಕ್ರೆಡಿಟ್ ಕಾರ್ಡ್) ಜೊತೆಗೆ ಇಂದಿನ ಲೋಕವು ಅಧಿಕವಾಗಿ ಸಾಮಾನುಗಳನ್ನು ಶೇಖರಿಸುವಂತಹ ಆಸೆಗೆ ದೂಡುತ್ತದೆ. ಆದ್ದರಿಂದಲೇ ಈ ಲೋಕವು ಒಂದನ್ನೂ ಮಾಡಲಾರದಂತಹ ನಿರ್ಗತಿ0ಯಾದ ಸ್ಥಿತಿಗೆ ಮನುಷ್ಯನನ್ನು ತಂದು ನಿಲ್ಲಿಸುತ್ತವೆ. ತಮ್ಮ ಶಕ್ತಿಗೂ ಮೀರಿದಂತೆ ಖರ್ಚು ಮಾಡುವುದೂ ನಂತರ ಭ0ಯಂಕರವಾದ ಕಷ್ಟದಲ್ಲಿ ಸಿಕ್ಕಿಕೊಳ್ಳುವುದೂ ಬಹಳ ಸುಲಭ. ಕೆಲವು ಸಂದರ್ಭಗಳಲ್ಲಿ ಈ ಕಷ್ಟವು ಎದುರಿಗೇ ಬಂದು ಬಿಡುತ್ತವೆ. ಆದರೆ ಅನೇಕ ಸಮ0ಯಗಳಲ್ಲಿ ಒಬ್ಬ ಸಹೋದರ ಅಥವಾ ಸಹೋದರಿ ತನ್ನ ಸಮ0ಯ ಹಾಗೂ ಶಕ್ತಿ0ಯನ್ನು ತನ್ನ ಕೆಲಸದಲ್ಲಿ (ಕೆಲವು ಸಂದರ್ಭಗಳಲ್ಲಿ ಇನ್ನೊಂದು ಕೆಲಸದಲ್ಲೂ) ಖರ್ಚುಮಾಡಿ, ಹೇರಳವಾದ ಸಾಲದ ಮೊತ್ತವನ್ನು ಕಟ್ಟಲು ಕಷ್ಟಪಡುತ್ತಾರೆ. ಆದರೆ ದೇವರ ಕೆಲಸವು ನಿರಾಕರಣೆ ಹೊಂದುತ್ತದೆ, ಹಣಕ್ಕಾಗಿ ನಾವು ಎಷ್ಟೋ ತ್ಯಾಗ ಮಾಡುತ್ತೇವೆ ಆದರೆ ಸತ್ಯಕ್ಕಾಗಿ ನಾವು ತ್ಯಾಗ ಮಾಡುತ್ತಿಲ್ಲ.



ಈ 0ಯೌವ್ವನಸ್ಥನು ಎಷ್ಟರಮಟ್ಟಿಗೆ ತನನ್ನು ತಗ್ಗಿಸಿಕೊಂಡನೆಂದರೆ, ಆ ದೇಶದ ನಿವಾಸಿಗಳಲ್ಲೊಬ್ಬನ ಬಳಿಗೆ ಹೋಗಿ ಅವನಲ್ಲಿ ದಾಸನಾಗಿ ಕೆಲಸಕ್ಕೆ ಸೇರಿಕೊಂಡನು. ಬೇರೆ ಮಾತಿನಲ್ಲಿ ಹೇಳಬೇಕಾದರೆ–ಬೇರೆ ಮತದವನು ಅವನ 0ಯಜಮಾನನಾಗುತ್ತಾನೆ. ಒಬ್ಬ 0ಯೆಹೂದ್ಯನಿಗೆ ಅತ್ಯಂತ ಹೀನವಾದ ಕೆಲಸವಾದ ಹಂದಿಗಳನ್ನು ಮೇಯಿಸುವ ಕೆಲಸಕ್ಕೆ ಸೇರಿದನು.

ಅತ್ಯಂತ ಹೆಚ್ಚಾದ ಸಾಮಾನುಗಳನ್ನು ಕೊಂಡುಕೊಂಡು ಸಾಲವನ್ನು ತೀರಿಸಲಾಗದೆ ನಾವು ಕಷ್ಟಪಟ್ಟು ನಮ್ಮನ್ನು ಇಂಥ ಸ್ಥಿತಿಗೆ ತೆಗೆದುಕೊಂಡುಬಂದು ನಿಲ್ಲಿಸುತ್ತದೆ ನೋಡಿರಿ.

## ಎಚ್ಚೆತ್ತುಕೊಳ್ಳುವುದು ಮತ್ತು ಪಶ್ಚಾತ್ತಾಪಪಡುವುದು :–

ಈ ಸಮ0ಯದಲ್ಲಿ0ಯೇ ಒಂದು ಮುಖ್ಯವಾದ ಘಟನೆ ಜರುಗಿತು. 0ಯೌವ್ವನಸ್ಥನು ಎಚ್ಚೆತ್ತು ತನ್ನ ಪಾಪಗಳನ್ನು ಕುರಿತು ಜಾಗೃತಿ ಹೊಂದಿದನು. ಕೆಲವು ಸಮ0ಯಗಳಲ್ಲಿ ನಮ್ಮ ಅಪಜ0ಯಗಳ ಭ0ಯಂಕರವನ್ನು ತಿಳಿದುಕೊಳ್ಳಲು ಅಡಿಮಟ್ಟಕ್ಕೇ ನಾವು ಹೋಗಬೇಕಾಗುತ್ತದೆ. ಇದು ಮನುಷ್ಯನ ಸ್ವಭಾವದಲ್ಲಿನ ಒಂದು ಗುರುತು. ಈ ಪಾಠವು ಎಷ್ಟು ವೇದನೆ0ಯನ್ನು ಕೊಡುವಂತಹದು ಆಗಿದ್ದರೂ, ಕೆಲವು ಸಮ0ಯಗಳಲ್ಲಿ ಒಬ್ಬನು ತನ್ನ ಜೀವಿತವನ್ನು ವಿನಾಶಪಡಿಸಿಕೊಳ್ಳುವ ದಾರಿ0ಯಲ್ಲಿ ಹೋಗಲು 0ಯತ್ನಿಸುವಾಗ, ನಾವು ಮಾತನಾಡದೆ ಸುಮ್ಮನೆ ನೋಡುತ್ತಲಿರುತ್ತೇವೆ. ನಾವು ಕೊಡುವ ಎಚ್ಚರಿಕೆಗಳೆಲ್ಲಾ ವ್ಯರ್ಥವಾಗಿ ಹೋಗುತ್ತವೆ. ಆದರೆ ನಾವು ಬಿಟ್ಟುಬಿಡಬಾರದು, ಅವನ ಜೀವಿತದಲ್ಲಿ 0ಯಾವುದಾದರೂ ಒಂದು ಸಂದರ್ಭದಲ್ಲಿ ಅವನು ಸಿದ್ಧನಾಗಿರುವುದಾದರೆ ಮಾತ್ರವೇ, ನಾವು ಹೇಳುವುದನ್ನು ಕೇಳುವನು.



0ಯೌವ್ವನಸ್ಥನು ತನ್ನ ಪಾಪವು ಏನೆಂಬುದನ್ನು ಅರ್ಥ ಮಾಡಿಕೊಳ್ಳುತ್ತಾನೆ. “ನಾನು ಪರಲೋಕಕ್ಕೆ ವಿರೋಧವಾಗಿ0ಯೂ ನನ್ನ ತಂದೆ0ಯ ಮುಂದೆ0ಯೂ ಪಾಪ ಮಾಡಿದ್ದೇನೆ” ಹೇಗಿದ್ದರೂ ಎಲ್ಲಾ ಪಾಪಗಳು ಕರ್ತನಾದ ದೇವರಿಗೆ ವಿರೋಧವಾದದ್ದೇ (ಆದಿಕಾಂಡ 39:9, ಕೀರ್ತನೆ 51:4).

ಇಂತಹ ತಳಹದಿ0ಯ ಸತ್ಯವನ್ನು ಬೋಧಿಸುವ ರೀತಿ0ಯಲ್ಲಿ, 0ಯೌವ್ವನಸ್ಥನು ದೇವರ ಕ್ಷಮಾಪಣೆ0ಯನ್ನು ಅಂಗಲಾಚಬೇಕೆಂಬುದಾಗಿ0ಯೂ, ಶಾರೀರಿಕವಾದ ತಂದೆ0ಯ ಕರುಣೆಗಾಗಿ ಕೆಳಗೆ ಬೀಳಬೇಕೆಂದು, ತನ್ನ 0ಯೋಚನೆಗಳಲ್ಲಿ 0ಯೋಚಿಸುವಂತೆ ಮಾಡಿದನು. ಅದೇ ಸರಿ0ಯಾದ ರೀತಿ0ಯಾಗಿದೆ, ಮೊದಲು ದೇವರ ಬಳಿ0ಯಲ್ಲಿ ನಮ್ಮ ಪಾಪಗಳನ್ನು ಒಪ್ಪಿಕೊಳ್ಳಬೇಕು ನಂತರ ಮನುಷ್ಯನಲ್ಲಿ ಅದರ ಸಂಬಂಧವಾದ ಕ್ರಿ0ಯೆ0ಯನ್ನು ನಡೆಸಬೇಕು.

“ಇನ್ನೆಂದಿಗೂ ನಾನು ನಿನ್ನ ಮಗನೆಂದು ಕರೆಸಿಕೊಳ್ಳುವುದಕ್ಕೆ 0ಯೋಗ್ಯನಲ್ಲ; ನಾನು ನಿನ್ನ ಕೂಲಿ0ಯಾಳುಗಳಲ್ಲಿ ಒಬ್ಬನಂತೆ ಮಾಡು ಎನ್ನುವೆನು ಅಂದುಕೊಂಡನು” (ಲೂಕ 15:19).

ಇದನ್ನು ಹೇಳುವುದರಲ್ಲಿ ನಮ್ಮ ಕರ್ತನಾದ 0ೀಸುಕ್ರಿಸ್ತನು ಒಂದು ಪರಂಪರೆ ಸಾಮ್ಯದೊಳಗೆ ಫರಿಸಾ0ುರನ್ನೂ, ಶಾಸ್ತ್ರಿಗಳನ್ನು ತೆಗೆದುಕೊಂಡುಬರುತ್ತಾನೆ. ಈ ಸಾಮ್ಯದ ನೀತಿ ಬೋಧನೆ ಏನಂದರೆ, "ಒಬ್ಬ ಸ್ನೇಹಿತನ ಅವಿಧೇ0ುನಾದ ಪುತ್ರನು ದಾಸತ್ವದಿಂದ ಮಗನಾಗಿ ಅಲ್ಲ, ವಿಧೇ0ುತೆ0ುನ್ನು ಅವನಿಂದ ಖಡ್ಡಾ0ುವಾಗಿ ಹೊಂದುವಂತೆ ದಾಸನಾಗಿ ಬಿಡುಗಡೆ ಹೊಂದುತ್ತಾನೆ". 0ೀಸು ಸಾಮ್ಯದಲ್ಲಿ ಪೂರ್ಣವ್ಯತ್ಯಾಸವಾದ ಒಂದು ಅಂತ್ಯವನ್ನು ಕೊಡುತ್ತಾನೆ.

## ತಂದೆ0ು ಕ್ಷಮಾಪಣೆ :–

0ೌವ್ವನಸ್ಥನು ತನ್ನ ತಂದೆ0ು ಬಳಿಗೆ ಬರುತ್ತಾನೆ, "ಅವನು ಇನ್ನೂ ಬಹಳ ದೂರದಲ್ಲಿರುವಾಗಲೇ ಅವನ ತಂದೆ0ು ಅವನನ್ನು ನೋಡಿ ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಮುದ್ದಿಟ್ಟನು" (ಲೂಕ 15:20). ಇದು ಹೇಗೆ ಸಾಧ್ಯ? ಇಲ್ಲಿ ಸರಿ0ಾದ ಭಾಷಾಂತರವಾಗಿದೆ, ಮೂಲ ಗ್ರೀಕ್ ಭಾಷೆ0ುಲ್ಲಿ "ಬಹಳ ದೂರದಲ್ಲಿ" ಎಂಬ ಅರ್ಥಕೊಡುತ್ತದೆ. ಅವನ ತಂದೆ ಅನುದಿನವೂ ಒಂದು ಎತ್ತರವಾದ ಸ್ಥಳಕ್ಕೆ ಹೋಗಿ ನಿಂತುಕೊಂಡು ಕಣ್ಣು ಕಾಣುವಷ್ಟು ದೂರದವರೆಗೂ ತನ್ನ ಮಗನು ಹೋಗಿದ್ದ "ದೂರದೇಶದ" ದಿಕ್ಕಿನಲ್ಲಿ ನೋಡುತ್ತಾ ಇದ್ದು, ತನ್ನ ಮಗನನ್ನು 0ಾವಾಗಲಾದರೂ ನೋಡಬಹುದೆಂಬ ನಂಬಿಕೆಯಿಂದ ಪ್ರಾರ್ಥಿಸುತ್ತಿರುವನು ಎಂದು ನಾವು ಅರ್ಥಮಾಡಿಕೊಳ್ಳಬಹುದು.

ಅವನನ್ನು ನೋಡಿದಾಕ್ಷಣವೇ–ತಂದೆ0ು ಮನಮರುಗಿ, ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಮುದ್ದಿಟ್ಟನು ಎಂದು ಬರೆದದೆ. ಮುಖ್ಯವಾದ ಸತ್ಯವೇನೆಂದರೆ, ತಂದೆ0ು ತನ್ನ ಮಗನನ್ನು ಪರಿಪೂರ್ಣವಾಗಿ ಆಹ್ವಾನಿಸಿ ಅಂಗೀಕರಿಸಿಕೊಂಡನು.

## ಸುಧಾರಣೆ ಮತ್ತು ಕೊಂಡಾಟ :–

ತಾನು ನೋಡಿದ ಮಗನನ್ನು ತಂದೆ0ು ಆಹ್ವಾನಿಸಿದ್ದು ಮಾತ್ರವಲ್ಲ, ಕುಟುಂಬದಲ್ಲಿ ಅವನಿಗೆ ಮ0ುರ್ಯಾದೆ0ುನ್ನು ತಿರುಗಿ ಸಂಪಾದಿಸಿಕೊಟ್ಟನು. ಮೊದಲನೆ ಶತಮಾನದಲ್ಲಿ ವ್ಯಾಪಾರದಂತಹ ಪತ್ರಗಳಲ್ಲಿ ಮುದ್ರೆ0ುನ್ನು ಹಾಕಲು ಉಂಗುರವನ್ನು ಉಪ0ೋಗಿಸಿದಂತೆ ಅವನ ಬೆರಳಿನಲ್ಲಿಉಂಗುರವನ್ನು ತೊಡಿಸಿದನು.

ಸ್ವಾರಸ್ಯಕರವಾದ ವಿಷ0ುವೇನೆಂದರೆ– ದೇವರು ನಮ್ಮ ಪಾಪಗಳನ್ನು ಮನ್ನಿಸುವುದು ಮಾತ್ರವಲ್ಲ, ಅವುಗಳನ್ನು ಪರಿಪೂರ್ಣವಾಗಿ ತೆಗೆದುಬಿಡುತ್ತಾನೆ. ಅಪೊಸ್ತಲರ ಕೃತ್ಯಗಳು 3:19ರಲ್ಲಿ ಪಾಪಗಳ ನಿವೃತ್ತಿ0ು ಬಗ್ಗೆ ಹೇಳಿ0ುದೆ. ನಾವು ಅದರಂತೆ0ೀ ಮಾಡುತ್ತಿದ್ದಿವಿ0ೋ? ಎಂಥಹ ಸಂದರ್ಭದಲ್ಲೂ ಜ್ಞಾನವನ್ನು ಹಿಂಬಾಲಿಸಬೇಕಾದ ರೀತಿ ಇದು. ಪಾಪಿ0ು ವಿಷ0ುದಲ್ಲಿ ಪಶ್ಚಾತ್ತಾಪವೂ, ಕ್ಷಮಾಪಣೆ0ೂ ಒಂದಾಗಿ ಬರುವಂತೆ, ಅನ್ಯಾ0ುವನ್ನು ಅನುಭವಿಸಿದವನು ಮರೆತು ಬಿಡದಿದ್ದರೆ ಪ್ರ0ೋಜನವಿಲ್ಲ. ದೇವರು ಪಾಪವನ್ನು ಮನ್ನಿಸುವುದು ಮಾತ್ರವಲ್ಲ, ಅದರ ನೆನಪೇ ಇಲ್ಲದಂತೆ ತೆಗೆದುಹಾಕುವುದಾಗಿ ಹೇಳುವಾಗ, ನಾವೂ ಸಹಾ ಅದನ್ನೇ ಮಾಡಬೇಕು.

ಕೊಬ್ಬಿದ ಕರು(ವಚನ 23, 27, 30)ವು ಒಂದು ವಿಶೇಷವಾದ ಔತಣಕ್ಕೆ ಕೊ0್ಯುಲ್ಪಡುತ್ತದೆ. ಕೊಬ್ಬಿದ ಎಂದರೆ ಮನೆ0ುಲ್ಲೇ ಇಟ್ಟುಕೊಂಡು ಧಾನ್ಯವನ್ನು ತಿನ್ನಿಸಿ ಕೊಬ್ಬಿಸಿದ್ದು ಎಂದರ್ಥ. 29ನೇ ವಚನದಲ್ಲಿ ಕರು ಎಂದಿದೆ, ಈ ಎಳೆ0ು ಚಿಕ್ಕ ಪ್ರಾಣಿ0ು ಮಂದೆ0ು ಜೊತೆ ಸೇರಿ ಓಡಲೂ, ಹುಲ್ಲುಗಾವಲಲ್ಲಿ ಅಲೆದಾಡಿ ತಿನ್ನಲು ಅನುಮತಿಯಿಲ್ಲ.



ಸಾಧಾರಣವಾಗಿ ಒಬ್ಬ ಮಗನು(ಅಂದರೆ ಸಹೋದರ ಅಥವಾ ಸಹೋದರಿ) ಲೋಕದಲ್ಲಿ ಅಲೆದು ಕೆಟ್ಟುಹೋದರೆ ಅವರು ತಮ್ಮನ್ನು ಅರ್ಹರಲ್ಲವೆಂಬುದಾಗಿ ನೆನಸಿಕೊಳ್ಳುವುದರಿಂದಲೇ ತಾನು ಪ್ರೀತಿಸಲ್ಪಡುವುದಿಲ್ಲ. ಹಲವಾರು ಕಾರಣಗಳಿಗಾಗಿ ಇಷ್ಟಪಡುವುದಿಲ್ಲ ಎಂದು ನೆನಸುತ್ತಾರೆ. ಅವರಿಗೆ ಅಗತ್ಯವದದ್ದು 0ಾವದೆಂದರೆ ಅವರು ವಿಶೇಷವಾದವರು ಎಂದು ಅವರು ಅರಿತುಕೊಳ್ಳುವಂತೆ ಮಾಡುವುದು. ಅವರು ಹಿಂದಿರುಗಿ ಬರುವುದನ್ನು ಸುಲಭ ಮಾಡಿಕೊಡುವುದು, ಅದರಲ್ಲೂ ಮುಖ್ಯವಾಗಿ ಇನ್ನೆಂದು ಮನೆಬಿಟ್ಟು ಹೋಗಲು ನೆನಸದಂತೆ ಮಾಡುವುದು.

## ಹಿರಿ0ು ಸಹೋದರನು :–

ಹಿರಿ0ು ಸಹೋದರ ಬಗ್ಗೆ ಏನು? ಸಾಧಾರಣವಾಗಿ ಅವನನ್ನು ಮೋಸವಾದವನೆಂದೂ, ಶಾಸ್ತ್ರಿಗಳಿಗೂ ಫರಿಸಾ0ುರಿಗೂ ಒಂದು ಉದಾಹರಣೆ ಎಂದು ಹೇಳುತ್ತಾರೆ. ಈ ಹೇಳಿಕೆ ಸ್ವಲ್ಪ ಮಾತ್ರ ಸತ್ಯ, 0ಾಕಂದರೆ ತಂದೆ0ು ಪ್ರೀತಿಯಿಂದ ವಿವರಿಸಿ ಹೇಳುವಾಗ ಮರು ಉತ್ತರವನ್ನೇನು ಕೊಡಲಿಲ್ಲ, ಅಂದರೆ ತಂದೆ ಹೇಳಿದ್ದನ್ನು ಅವನು ಅಂಗೀಕರಿಸಿದನೆಂದು ಊಹಿಸಿಕೊಳ್ಳಬಹುದು.

ಪ್ರಕಟಿಸಲ್ಪಟ್ಟ ಸತ್ಯವೇನೆಂದರೆ, ಪಶ್ಚಾತ್ತಾಪ ಹೊಂದಿದ ಕಿರಿ0ು ಮಗನಿಗೆ ಕೊಟ್ಟ ವಿಶೇಷವಾದ ಆಹ್ವಾನದಿಂದ ನಮಗೆ ಆತ್ಮೀಕ ಪಾರವೊಂದನ್ನು ಹೇಳುತ್ತಾನೆ. ನಾವೂ ಅದೇ ಸತ್ಯವನ್ನು ಉಪ0ೋಗಿಸಬೇಕೆಂದು ಎದಿರುನೋಡುತ್ತಾನೆ, "ಮಗನೇ ನೀನು 0ಾವಾಗಲೂ ನನ್ನ ಸಂಗಡ ಇದ್ದೀ0ೆ, ನನಗಿರುವುದೆಲ್ಲವೂ ನಿನ್ನದೆ" (ಲೂಕ 15:31). ಇದನ್ನು ನಾವು ಹೇಗೆ ವಿವರಿಸಬಹುದು?

ಕಿರಿ0ುವನು ಕ್ಷಮಿಸಲ್ಪಟ್ಟದ್ದರಿಂದ ಹಿರಿ0ು ಮಗನಿಗೆ 0ಾವ ನಷ್ಟವಾಗಲಿಲ್ಲ. ಕೆಟ್ಟು ಹೋದವನೊಬ್ಬನು ಹೊಸಸೃಷ್ಟಿ ಹೊಂದಿದರೆ, 0ಾವಾಗಲೂ ಉತ್ತಮವಾಗಿ ಇರುವವರು ಒಂದರಲ್ಲೂ ನಷ್ಟ ಹೊಂದಲಾರರು. ಹಿರಿ0ು ಮಗನ ಹೊಟ್ಟೆಕಿಚ್ಚಿಗೆ ಮೂಲ ಕಾರಣ ತಪ್ಪಾದ ಉದ್ದೇಶಗಳೇ(ಲೂಕ 15:29). ಅವನ ಸ್ನೇಹಿತರು ಅವನ ತಂದೆಗೆ ಸ್ನೇಹಿತರಲ್ಲ, ಅವನು ತಂದೆ0ು ಆಜ್ಞೆಗೆ ಮೀರಿದವನೇ ಅಲ್ಲ, ಅದನ್ನೇ ತನ್ನ ತಂದೆ0ು ಮೇಲಿರುವ ಪ್ರೀತಿ ಮತ್ತು ಮ0ುರ್ಯಾದೆ0ು ನಿಮಿತ್ತ ಮಾಡಿದನೋ ಅಥವಾ ಸ್ವಹಿತವಾದ ಉದ್ದೇಶಗಳು ಕಾರಣವಾಗಿತ್ತೋ?

ತಂದೆ0ುಲ್ಲಿ ನಾವು ದೀರ್ಘಶಾಂತಿ ಹಾಗೂ ಅಪರಿಮಿತ ಸಹನೆ0ುನ್ನು ನೋಡುತ್ತೇವೆ. ತನ್ನ ಹಿರಿ0ು ಮಗನ ತಪ್ಪಾದ ಉದ್ದೇಶಗಳೇ ಹೊಟ್ಟೆಕಿಚ್ಚಿಗೆ ಕಾರಣ ಎಂಬುದನ್ನು ಅವನು ಅರಿತಿದ್ದನು. ಆದರೂ ಅವನು ಕಠಿಣವಾಗಿ ಮಾತನಾಡಲೇ ಇಲ್ಲ, ತಂದೆ0ು ಅವನಲ್ಲಿ ಬೇಡುವುದನ್ನು ನೋಡಿದರೆ, ಅವನು ಜಯಿಸಿಬಿಟ್ಟಂತೆ0ೇ ನಮಗೆ ಕಾಣುತ್ತದೆ, "ಆದಕಾರಣ ನಾವು ಉಲ್ಲಾಸಪಟ್ಟು ಆನಂದ ಪಡುವುದು 0ುಕ್ತವಾದದ್ದೇ" ಎಂದುಹೇಳಿ(ವಚನ 31) ಆ ಸಂತೋಷದಲ್ಲಿ ಸೇರಲು ಅವನು ಕೇಳಿಕೊಳ್ಳಲ್ಪಡುತ್ತಾನೆ, ಅವನು ಅದನ್ನು ನಿರಾಕರಿಸಲಿಲ್ಲವೆಂಬುದನ್ನು ನಾವು ಊಹಿಸಬಹುದು.

ಫರಿಸಾ0ುರನ್ನೂ, ಶಾಸ್ತ್ರಿಗಳನ್ನೂ ಮಾತ್ರವೇ ನಡೆಸಲಿಕ್ಕಾಗಿ ಹೇಳಿದ ಸಾಮ್ಯವು ಇದಾಗಿದ್ದರೆ 0ೀಸು ಅದನ್ನು ಮಾಡಿದ್ದಿರಬಹುದು, ಬದಲಾಗಿ ಇಡೀ ಕುಟುಂಬವೂ ಸಂತೋಷದಲ್ಲಿ ಭಾಗವಹಿಸಲು ಅವರನ್ನು ಕೇಳಿಕೊಳ್ಳುತ್ತಾನೆ. ಲೂಕ 15ನೇ ಅಧ್ಯಾ0ುದಲ್ಲಿರುವ ಇತರ ಎರಡು ಸಾಮ್ಯಗಳಂತೆ0ೇ ಇದೂ ಸಂತೋಷದಿಂದಲೂ ಆನಂದದಿಂದಲೂ ಅಂತ್ಯಗೊಳ್ಳುತ್ತದೆ. ನಿನ್ನ ಸಹೋದರನಾದ ಇವನೋ ಸತ್ತಿದ್ದನು ತಿರುಗಿ ಬದುಕಿ ಬಂದನು, ಪೋಲಿ ಹೋಗಿದ್ದನು, ತಿರುಗಿ ಸಿಕ್ಕಿದನು. ಕಂಡುಹಿಡಿ0ುಲ್ಪಟ್ಟ ಮಗನ ಸಾಮ್ಯವು ಹೀಗೆ ಅಂತ್ಯಗೊಳ್ಳುತ್ತದೆ.

–0–0–0–0–